2019 ಕ.ತೀ.ವ 668

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀ ವಿವೇಕಾನಂದ ಮೃತ್ಯುಂಜಯಪ್ಪ, ಬೆಟಗೇರಿ –ವಿರುದ್ಧ– ಕರ್ನಾಟಕ ರಾಜ್ಯ (ಕಾರ್ಯದರ್ಶಿ, ಸಹಕಾರ ಇಲಾಖೆ) ಮತ್ತು ಇತರರು*

ಕರ್ನಾಟಕ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 16(1)(ಎ) ಪ್ರಕರಣ.

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ. ಈ ರಿಟ್ ಅರ್ಜಿಯಲ್ಲಿ ಅರ್ಜಿದಾರರು, ಮಾರುಕಟ್ಟೆ ಸಮಿತಿಯಲ್ಲಿ ವ್ಯಾಪಾರಿಯನ್ನು ಮಾತ್ರ ಹೊರತುಪಡಿಸಿರುವುದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಎಪಿಎಂಸಿ' ಅಧಿನಿಯಮ ಎಂದು ಉಲ್ಲೇಖಿಸುವುದು) 16(1)(ಎ) ಪ್ರಕರಣವನ್ನು ವಜಾಗೊಳಿಸಿ ಸರ್ಷಿಯೋರರಿ ರಿಟ್ ಅನ್ನು ಜಾರಿ ಮಾಡುವಂತೆ ಪ್ರಾರ್ಥಿಸಿರುವರು ಮತ್ತು ಎರಡನೇ ಪ್ರತ್ಯರ್ಜಿದಾರರು ಸಂಖ್ಯೆ: ಸ.ಇ.69 ಎಂಆರ್‌ಇ 2017 (ಭಾ)ಅನ್ನು ದಿನಾಂಕ: 26.05.2017ರಂದು ಹೊರಡಿಸಿದ ಅನುಬಂಧ–ಇ ಯಲ್ಲಿರುವ ಪ್ರಶ್ನಿತ ಆದೇಶವನ್ನು ವಜಾಗೊಳಿಸಲು ಮತ್ತು ಅಂಥ ಇತರ ಪರಿಹಾರಗಳನ್ನು ಕೋರಿ ರಿಟ್ ಅರ್ಜಿಯನ್ನು ದಾಖಲಿಸಿರುವರು.

ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಅರ್ಜಿದಾರನು ಮೂಲತಃ ಕೃಷಿಕರಾಗಿರುವರು ಮತ್ತು ಪಾಲುದಾರಿಕೆ ಸಂಸ್ಥೆಯಲ್ಲಿ ವ್ಯಾಪಾರಿಯಾಗಿರುವರು. ವ್ಯಾಪಾರಿ ಪ್ರವರ್ಗದಲ್ಲಿ ಅವರನ್ನು ನಾಮ ನಿರ್ದೇಶನ ಮಾಡಿರುವುದಿಲ್ಲ ಮತ್ತು ಅದು ಅನರ್ಹತೆಗೆ ಬಾಧ್ಯವಾಗಿರುವುದಿಲ್ಲ.

*ರಿ.ಅ.ಸಂ. 104398/2017 (ಎಪಿಎಂಸಿ), ದಿನಾಂಕ 30ನೇ ಆಗಸ್ಟ್, 2017.

ಹಾಗಾಗಿ, ದಿನಾಂಕ: 26.05.2017 ರಂದು 2ನೇ ಪ್ರತ್ಯರ್ಜಿದಾರರು ಹೊರಡಿಸಿದ ಅನುಬಂಧ–ಇ ಯಲ್ಲಿರುವ ಪ್ರಶ್ನಿತ ಆದೇಶವನ್ನು, ಅರ್ಜಿದಾರರಿಗೆ ಅವಕಾಶವನ್ನು ನೀಡದಿರುವ ಕಾರಣದ ಮೇಲೆ ಪ್ರಶ್ನಿತ ಆದೇಶವು ವಜಾ ಮಾಡಲು ಬಾದ್ಯವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

ಅರ್ಜಿದಾರರು ಎಪಿಎಂಸಿ ನಿರ್ದೇಶಕರಿಂದ ಲೈಸೆನ್ಸ್ ಹೊಂದಿರುವ ಹಾವೇರಿಯಲ್ಲಿರುವ ಮೆ॥ ಬೆಟಗೇರಿ ವಾಣಿಜ್ಯ ಕಂಪನಿಯಲ್ಲಿ ಪಾಲುದಾರಿಕೆ ಹೊಂದಿಲ್ಲವೆಂದು ರುಜುವಾತು ಪಡಿಸಲು ವಿಫಲರಾಗಿರುವರು. ಈ ಸಂಬಂಧದಲ್ಲಿ ಅರ್ಜಿದಾರರ ಹೆಸರು ಹಾವೇರಿಯ ವ್ಯಾಪಾರಸ್ಥರ "ಮತದಾರ"ರ ಪಟ್ಟಿಯಲ್ಲಿ ಕ್ರ.ಸಂ.3ರಲ್ಲಿರುವುದನ್ನು ಸ್ಪಷ್ಟಪಡಿಸಿರುತ್ತಾರೆ. ಆದುದರಿಂದ ಅರ್ಜಿದಾರರು ಕಾನೂನಿನ ಉಪಬಂಧಗಳಗನುಸಾರವಾಗಿ ಅಂಥ ಪ್ರಶ್ನಿತ ಅಧಿಸೂಚನೆಯ ಪ್ರಕಾರದಂತೆ ಮೇಲಿನ ಉಪಬಂಧಗಳ ಅಡಿಯಲ್ಲಿ ಅರ್ಜಿದಾರರು ಅನರ್ಹತೆಗೆ ಒಳಗಾಗುವರು. ಆದುದರಿಂದಲೇ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ರಿಟ್ ಅರ್ಜಿಯನ್ನು ವಜಾ ಮಾಡುವಂತೆ ಪ್ರಾರ್ಥಿಸಿರುವರು.

ಅರ್ಜಿದಾರರು ವ್ಯಾಪಾರಿ ಲೈಸೆನ್ಸ್ ಅನ್ನು ಹೊಂದಿರುವರು ಮತ್ತು ಅವರೊಬ್ಬ ವ್ಯಾಪಾರಸ್ಥರಾಗಿರುವರು ಎಂಬುದನ್ನು ರುಜುವಾತುಪಡಿಸುವ ವ್ಯಾಪಾರಿ ಲೈಸೆನ್ಸಿನ ಒಂದು ಪ್ರತಿಯನ್ನು ಅನುಬಂಧ– ಆರ್.1ರಲ್ಲಿ ಹಾಜರುಪಡಿಸಿರುವರು. "ಏಜೆಂಟ್ ಮತ್ತು ವ್ಯಾಪಾರಿಗಳ" ಸಮಿತಿಯ ಮತದಾರರ ಪಟ್ಟಿಯಲ್ಲಿ ಅರ್ಜಿದಾರರು ಹೆಸರು ಇರುವುದನ್ನು ಬಹಿರಂಗಪಡಿಸುವ ಮತಪಟ್ಟಿಯ ಪ್ರತಿಯನ್ನು ಅನುಬಂಧ– ಆರ್.2ರಲ್ಲಿ ಹಾಜರುಪಡಿಸಿರುವರು.

ಸದರಿ ದಸ್ತಾವೇಜುಗಳ ಆಧಾರದ ಮೇಲೆ ಅರ್ಜಿದಾರರು ಏಜೆಂಟುಗಳ ಮತ್ತು ವ್ಯಾಪಾರಿಗಳ ಸಮಿತಿಯ ಮತಕ್ಷೇತ್ರಕ್ಕಾಗಿ ನಡೆದು ಚುನಾವಣೆಯಲ್ಲಿ ಸ್ಪರ್ಧಿಸಿರುವುದು ರುಜುವಾತಾಗುತ್ತದೆ. ಆದರೆ ಚುನಾವಣೆಯಲ್ಲಿ ಅವರು ಸೋತಿರುತ್ತಾರೆ. 2016ರ ವರ್ಷದಲ್ಲಿ ಮಾರುಕಟ್ಟೆ ಸಮಿತಿಯ ಚುನಾವಣೆಯು ನಡೆದಿರುತ್ತವೆ, ಚುನಾವಣಾ ಪ್ರಕ್ರಿಯೆಗಳೆಲ್ಲವು 14.01.2017ರಂದು ಮುಕ್ತಾಯಗೊಂಡಿರುತ್ತದೆ.

ರಿಟ್ ಅರ್ಜಿ ಸಂಖ್ಯೆ: 103646/2017ರಲ್ಲಿ ಅರ್ಜಿದಾರರನ್ನು ನಾಮ ನಿರ್ದೇಶನ ಮಾಡಲು ಅವಲಂಬಿಸಿದ 'ಎಪಿಎಂಸಿ ಅಧಿನಿಯಮ'ದ 16(1)(ix) ಪ್ರಕರಣದ ಉಪಬಂಧಗಳ ಅನುಸಾರ ವಜಾ ಮಾಡಬೇಕೆಂದು ಕೋರಿರುತ್ತಾರೆ. ಮೇಲೆ ಹೇಳಲಾದ ರಿಟ್ ಅರ್ಜಿಯನ್ನು ಸರ್ಕಾರಕ್ಕೂ ಸಲ್ಲಿಸಲಾಗಿದೆ. ಅರ್ಜಿದಾರರ ನಾಮ ನಿರ್ದೇಶನವನ್ನು ಹಿಂತೆಗೆದುಕೊಳ್ಳುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲು ಕೋರಿರುವರು ಮತ್ತು ತತ್ಪರಿಣಾಮವಾಗಿ ಈ ರಿಟ್ ಅರ್ಜಿಯಲ್ಲಿ ಅನುಬಂಧ–ಇಯನ್ನು ಪ್ರಶ್ನಿಸಿರುವರು. ಪ್ರಶ್ನಿತ ಅಧಿಸೂಚನೆಯನ್ನು ಕರ್ನಾಟಕ ಸರ್ಕಾರ, ಸಹಕಾರಿ ಇಲಾಖೆಯವರು ಹೊರಡಿಸಿರುತ್ತಾರೆ.

ಸರ್ಕಾರವು ಅರ್ಜಿದಾರನ ವೃತ್ತಿಯು ವ್ಯಾಪಾರಿಯಾಗಿರುವ ಸಂಗತಿಯನ್ನು ಅದು ಪರಿಗಣಿಸಿದೆ ಮತ್ತು ಎಪಿಎಂಸಿ ಅಧಿನಿಯಮದ 16ನೇ ಪ್ರಕರಣ ನಿಷೇದಕ್ಕೆ ಒಳಗಾಗುವುದನ್ನು ತಪ್ಪಿಸುವ ಸಲುವಾಗಿಯೇ ಸರ್ಕಾರವು ಇಚ್ಛಾನುಸಾರ ತತ್ವದ ಅಡಿಯಲ್ಲಿ ನಾಮ ನಿರ್ದೇಶನವನ್ನು ಹಿಂಪಡೆದುಕೊಂಡಿದೆ. ಅರ್ಜಿದಾರರು ಒತ್ತಾಯಿಸಿದ ವಿವಿಧ ಕಾರಣಗಳು ಮತ್ತು ಈ ಸಂಬಂಧದಲ್ಲಿ ಅರ್ಜಿದಾರರು ಅವಲಂಬನೆಯಾಗಿ ನೀಡಿದ ನಿರ್ಣಯಗಳು ಅರ್ಜಿದಾರರ ಮೊಕದ್ದಮೆಗೆ ಸಮರ್ಥನೀಯವಾಗಿರುವುದಿಲ್ಲ. ಈ ಎಲ್ಲ ಕಾರಣದಿಂದ ರಿಟ್ ಅರ್ಜಿಯು ಗುಣಾರ್ಹತೆಯನ್ನು ಹೊಂದಿಲ್ಲದ ಕಾರಣ ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ.

ರಿಟ್ ಅರ್ಜಿಯು ವಜಾಗೊಂಡಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *(1955) 2 ಎಸ್‌ಸಿಆರ್ 1196;*
   *ಎಐಆರ್ 1956 ಎಸ್‌ಸಿ 246; (1956) 29 ಐಟಿಆರ್ 349*
   *ಎ. ತಂಗಲ್ ಕುಂಜು ಮುಸಲಿಯಾರ್ –ವಿರುದ್ಧ–*
   *ಎಂ. ವೆಂಕಿಟಾಚಲಂ ಪೊಟ್ಟಿ* *(ಉಲ್ಲೇ) 8*

*2. ಎಐಆರ್ 1963 ಎಸ್‌ಸಿ 1241*
*ಎಐಆರ್ 1964 1 ಎಸ್‌ಸಿಆರ್ 371*
*ಪಶ್ಚಿಮ ಬಂಗಾಳ ರಾಜ್ಯ –ವಿರುದ್ಧ– ಭಾರತ ಒಕ್ಕೂಟ (ಉಲ್ಲೇ) 8*
*3. 2012 (5) ಕರ್ನಾಟಕ ಎಲ್.ಜೆ. 116(ಡಿಬಿ)*
*ಖುಸ್ರೋ ಖುರೈಷಿ –ವಿರುದ್ಧ–*
*ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 13*
*4. 1993 ಎಐಆರ್ (ಎಸ್‌ಸಿಡಬ್ಲ್ಯೂ) 1254*
*ತಮ್ಮಣ್ಣ –ವಿರುದ್ಧ– ಕರ್ನಾಟಕ ರಾಜ್ಯ (ಉಲ್ಲೇ) 21*
*5. ಐಎಲ್‌ಆರ್ 1994 ಕರ್ನಾಟಕ 308*
*ಓಂ ನರೈನ್ ಅಗರವಾಲ್ –ವಿರುದ್ಧ–*
*ನಗರ ಪಾಲಿಕಾ, ಷಹಜಹನಪುರ್ (ಉಲ್ಲೇ) 22*

ಅರ್ಜಿದಾರರ ಪರ : ಶ್ರೀ ಪದ್ಮನಾಭ ಮಹಾಲೆ, ಹಿರಿಯ ವಕೀಲರ ಪರವಾಗಿ
ಶ್ರೀ ಸತೀಶ್ ಎಂ. ದೊಡ್ಡಮನಿ, ವಕೀಲರು
1 ರಿಂದ 3ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಕೆ. ವಿದ್ಯಾವತಿ, ಎ.ಜಿ.ಎ.,
4ನೇ ಪ್ರತ್ಯರ್ಜಿದಾರರ ಪರ: ಶ್ರೀ ಸಿ.ವಿ. ಅಂಗಡಿ, ವಕೀಲರು,
5ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಫ್.ವಿ. ಪಾಟೀಲ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:**

ಈ ರಿಟ್ ಅರ್ಜಿಯಲ್ಲಿ ಅರ್ಜಿದಾರರು, ಮಾರುಕಟ್ಟೆ ಸಮಿತಿಯಲ್ಲಿ ವ್ಯಾಪಾರಿಯನ್ನು ಮಾತ್ರ ಹೊರತುಪಡಿಸಿರುವುದರಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಎಪಿಎಂಸಿ' ಅಧಿನಿಯಮ ಎಂದು ಉಲ್ಲೇಖಿಸುವುದು)

16(1)(ಎ) ಪ್ರಕರಣವನ್ನು ವಜಾಗೊಳಿಸಿ ಸರ್ಷಿಯೋರರಿ ರಿಟ್ ಅನ್ನು ಜಾರಿ ಮಾಡುವಂತೆ ಪ್ರಾರ್ಥಿಸಿರುವರು ಮತ್ತು ಎರಡನೇ ಪ್ರತ್ಯರ್ಜಿದಾರರು ಸಂಖ್ಯೆ: ಸ.ಇ.69 ಎಂಆರ್‌ಇ 2017 (ಭಾ)ಅನ್ನು ದಿನಾಂಕ: 26.05.2017ರಂದು ಹೊರಡಿಸಿದ ಅನುಬಂಧ–ಇ ಯಲ್ಲಿರುವ ಪ್ರಶ್ನಿತ ಆದೇಶವನ್ನು ವಜಾಗೊಳಿಸಲು ಮತ್ತು ಅಂಥ ಇತರ ಪರಿಹಾರಗಳನ್ನು ಕೋರಿ ರಿಟ್ ಅರ್ಜಿಯನ್ನು ದಾಖಲಿಸಿರುವರು.

2. ಅರ್ಜಿದಾರರ ಪರವಾಗಿ ಹಾಜರಾದ ಶ್ರೀ ಪದ್ಮನಾಭ ಮಹಾಲೆಯವರ ವಾದವನ್ನು ಮತ್ತು ಪ್ರತ್ಯರ್ಜಿದಾರ 1 ರಿಂದ 3 ಅವರ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀಮತಿ ವಿದ್ಯಾವತಿ, ಎಜಿಎ, ಪ್ರತ್ಯರ್ಜಿದಾರ 4ರ ಪರವಾಗಿ ಮಾನ್ಯ ನ್ಯಾಯವಾದಿ ಸಿ.ವಿ. ಅಂಗಡಿ ಮತ್ತು ಪ್ರತ್ಯರ್ಜಿದಾರ 5ರ ಪರವಾಗಿ ಮಾನ್ಯ ನ್ಯಾಯವಾದಿ ಎಫ್.ವಿ. ಪಾಟೀಲ್ ಅವರುಗಳು ಮಂಡಿಸಿದ ವಾದಗಳನ್ನು ಆಲಿಸಲಾಗಿದೆ ಮತ್ತು ದಾಖಲೆಗಳನ್ನು ಸಹ ಅವಲೋಕಿಸಲಾಗಿದೆ.

3. ಅರ್ಜಿದಾರರ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿಯಾದ ಶ್ರೀ ಪದ್ಮನಾಭ ಮಹಾಲೆಯವರು ತಮ್ಮ ವಾದದಲ್ಲಿ ಅರ್ಜಿದಾರರು ಕೃಷಿಕರಾಗಿರುವರು, ವ್ಯವಸಾಯವೇ ಅವರ ವೃತ್ತಿಯಾಗಿದೆ ಮತ್ತು ಅರ್ಜಿದಾರರು ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು, ತಡಸ ಗ್ರಾಮದಲ್ಲಿರುವ ಸ್ವಂತ ಕೃಷಿ ಭೂಮಿಯನ್ನು ಹೊಂದಿರುವರು. ಮೇಲೆ ನಮೂದಿಸಿದ ಗ್ರಾಮದ ಸರಹದ್ದಿನಲ್ಲಿ ಅರ್ಜಿದಾರರು ಸ್ವಂತವಾಗಿ ಹೊಂದಿರುವ ಕೃಷಿ ಭೂಮಿಯ ಮ್ಯೂಟೇಷನ್ ನಮೂದ ಸಂಖ್ಯೆ: 1513 ಅನುಬಂಧ–ಎ ಯ ಮೂಲಕ ದಿನಾಂಕ: 30.08.1986ರ ಯಥಾ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿರುವರು. ಕೃಷಿ ಭೂಮಿಯ ದಾಖಲೆಯನ್ನು ಬಹಿರಂಗ ಪಡಿಸಿರುವ ಅಂಶವನ್ನು ನಿವೇದಿಸಿರುವರು. ಅಲ್ಲದೆ ಸ್ವಂತ ಕೃಷಿ ಭೂಮಿಯು ಸಹ ಅರ್ಜಿದಾರರ ಹೆಸರಿನಲ್ಲಿದೆ. ಬ್ಯಾಡಗಿ ತಾಲ್ಲೂಕಿನ ತಡಸಹಳ್ಳಿಯ ಮತದಾರ ಪಟ್ಟಿಯಲ್ಲಿ ಅರ್ಜಿದಾರರ ಹೆಸರು ಮುಂದುವರೆದಿರುತ್ತದೆ. 'ಎಪಿಎಂಸಿ' ಅಧಿನಿಯಮವನ್ನು ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಸಮರ್ಥ ಮಾರುಕಟ್ಟೆ ವ್ಯವಸ್ಥೆಯಡಿ ಅಭಿವೃದ್ಧಿಗೊಳಿಸಲು ಕೃಷಿ ಸಂಸ್ಕರಣಾ ಉತ್ತೇಜನೆಗಾಗಿ, ಕೃಷಿ ಉತ್ಪನ್ನಗಳ ಉತ್ತಮ ಮಾರುಕಟ್ಟೆಗಾಗಿ

ಪರಿಣಾಮಕಾರಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯು ಸಹ ಮೇಲ್ಪಾಟುಗೊಳಿಸುವ ಉದ್ದೇಶಕ್ಕಾಗಿಯೇ ಅಧಿನಿಯಮಿಸಲಾಗಿದೆ.

4. ಬ್ಯಾಡಗಿ ಎಪಿಎಂಸಿ ಚುನಾವಣೆ 2017ರ ಜನವರಿ ತಿಂಗಳಲ್ಲಿ ನಡೆಸಲಾಗಿದೆ. ಅದರಲ್ಲಿ ಅರ್ಜಿದಾರರನ್ನು 'ಎಪಿಎಂಸಿ' ಅಧಿನಿಯಮದ 11(1)(ix) ಪ್ರಕರಣದ ಅಡಿಯಲ್ಲಿ ಸರ್ಕಾರವು ವೃತ್ತಿಯಿಂದ ಕೃಷಿಕರಾಗಿರುವ ಅರ್ಜಿದಾರರನ್ನು ನಾಮ ನಿರ್ದೇಶನ ಮಾಡಿರುತ್ತದೆ. ಎಪಿಎಂಸಿ ಅಧಿನಿಯಮದ 11(1)(ix) ಪ್ರಕರಣ ಈ ಕೆಳಗಿನಂತಿದೆ:

> *"(ix) ಮಾರುಕಟ್ಟೆ ಸಮಿತಿಯ ಎಲ್ಲಾ ಸಭೆಗಳಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರುವ, ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಮೂವರು ಸದಸ್ಯರು ಮತ್ತು ಅವರು ರಾಜ್ಯ ಸರ್ಕಾರದ ಇಚ್ಛಾನುಸಾರ ಪದಧಾರಣ ಮಾಡತಕ್ಕದ್ದು:"*

5. ಎಪಿಎಂಸಿ ಅಧಿನಿಯಮದ 11(1)(ix)ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರರ ಜೊತೆಗೆ ಇತರ ಇಬ್ಬರು ವ್ಯಕ್ತಿಗಳನ್ನು ಸರ್ಕಾರವು ನಾಮ ನಿರ್ದೇಶನ ಮಾಡಿ ಹೊರಡಿಸಿದ ದಿನಾಂಕ: 08.02.2017 ಅಧಿಸೂಚನೆಯನ್ನು ಅನುಬಂಧ–ಬಿ ಯಲ್ಲಿ ಹಾಜರುಪಡಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ, ಅರ್ಜಿದಾರರ ಹೆಸರನ್ನು ತಪ್ಪಾಗಿ ನಮೂದಿತವಾಗಿರುತ್ತದೆ. ಅಂದರೆ ವಿವೇಕಾನಂದ ಮೃತ್ಯುಂಜಯಪ್ಪ ಬೆಟಗೇರಿ ಬದಲಾಗಿ ಶ್ರೀ ವಿನಾಯಕ ಮೃತ್ಯುಂಜಯಪ್ಪ ಬೆಟಗೇರಿ ಎಂದು ತಪ್ಪಾಗಿ ನಮೂದಿತವಾಗಿರುತ್ತದೆ. ಸದರಿ ತಪ್ಪನ್ನು ಸರಿಪಡಿಸಲು ದಿನಾಂಕ: 16.02.2017ರಂದು ತಿದ್ದೋಲೆಯ ಮೂಲಕ ತಪ್ಪನ್ನು ಸರಿಪಡಿಸಿ ಹೊರಡಿಸಿದ ಆದೇಶವನ್ನು ಅನುಬಂಧ–ಸಿ ಯಲ್ಲಿ ಲಗತ್ತಿಸಲಾಗಿದೆ.

6. ಮೇಲಿನಂತೆ ವಾಸ್ತವ ಸಂಗತಿಗಳು ಇರುವಾಗ, ಖಾಸಗೀ ಪ್ರತ್ಯರ್ಜಿದಾರ ಸಂಖ್ಯೆ: 5 ಅವರು ಬ್ಯಾಡಗಿ ಎಪಿಎಂಸಿಯ ಒಬ್ಬ ಸದಸ್ಯರಾಗಿ ನಾಮ ನಿರ್ದೇಶಿತರಾಗಿರುವ ಅರ್ಜಿದಾರರು ವೃತ್ತಿಯಲ್ಲಿ ವ್ಯಾಪಾರಿಯಾಗಿರುವುದರಿಂದ ನಾಮ ನಿರ್ದೇಶನಗೊಳ್ಳಲು ಅರ್ಜಿದಾರರು ಅರ್ಹರಾಗಿರುವುದಿಲ್ಲ ಎಂದು ಅರ್ಜಿಯಲ್ಲಿ ಆರೋಪಿಸಲಾಗಿರುತ್ತದೆ. ನಿರ್ದೇಶಕರು, ಎಪಿಎಂಸಿ, ಬೆಂಗಳೂರು ಇವರು ಸಂಬಂಧಪಟ್ಟ ಕಾರ್ಯದರ್ಶಿ, ಎಪಿಎಂಸಿ ಬ್ಯಾಡಗಿ ಇವರಿಗೆ ಖಾಸಗೀ ಪ್ರತ್ಯರ್ಜಿದಾರರು ಆಪಾದಿಸಿದ ದೂರು / ಮನವಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತಾರೆ. ಅದರಂತೆಯೇ ನಿರ್ದೇಶಕರು, ಎಪಿಎಂಸಿ, ಬೆಂಗಳೂರು ಇವರು ಅರ್ಜಿದಾರರಿಗೆ ಮನವಿಯ ವಿವರಗಳನ್ನು ನೀಡಿ ವಿವರಣೆ ನೀಡಬೇಕೆಂದು ನಿರ್ದೇಶಿಸಿರುತ್ತಾರೆ. ಅದರಂತೆ ಅರ್ಜಿದಾರರು ತಾವು ಕೃಷಿಕರಾಗಿದ್ದು, ತಡಸ ಗ್ರಾಮದಲ್ಲಿ ಸ್ವಂತ ಕೃಷಿ ಭೂಮಿಯನ್ನು ಹೊಂದಿರುವುದನ್ನು ದಿನಾಂಕ: 23.02.2017ರಂದು ನಿವೇದಿಸಿರುತ್ತಾರೆ. ನಿವೇದನೆಯ ಯಥಾ ಪ್ರತಿಯನ್ನು ಅನುಬಂಧ–ಡಿ ಯಲ್ಲಿ ಹಾಜರುಪಡಿಸಲಾಗಿದೆ.

7. 5ನೇ ಪ್ರತ್ಯರ್ಜಿದಾರರಾದ ಶ್ರೀಮತಿ ವನಿತಾ ಹೆಚ್. ಗುತ್ತಲ್ ಅವರು ಈ ನ್ಯಾಯಾಲಯದ ಮುಂದೆ ರಿ.ಅ.ಸಂಖ್ಯೆ: 103646/2017ರಲ್ಲಿ ದಿನಾಂಕ: 08.02.2017 ಹೊರಡಿಸಿದ ಸರ್ಷಿಯೋರರಿ ರಿಟ್ ಅನ್ನು ವಜಾಗೊಳಿಸಲು ಮತ್ತು ದಿನಾಂಕ: 16.02.2017ರ ತಿದ್ದೋಲೆಯಲ್ಲಿ ಅರ್ಜಿದಾರರನ್ನು ನಿರ್ದೇಶಕರು, ಎಪಿಎಂಸಿ, ಬ್ಯಾಡಗಿ, ಇಲ್ಲಿ ನಾಮ ನಿರ್ದೇಶನಗೊಳಿಸಿರುವುದನ್ನು ವಜಾಗೊಳಿಸಲು ಕೋರಿ ರಿಟ್ ಅರ್ಜಿಯನ್ನು ದಾಖಲಿಸಿರುವರು. ಸದರಿ ರಿಟ್ ಅರ್ಜಿಯಲ್ಲಿ 5ನೇ ಪ್ರತ್ಯರ್ಜಿದಾರರು, ದಿನಾಂಕ: 27.02.2017ರಲ್ಲಿ ಸಲ್ಲಿಸಿದ ಮನವಿಯನ್ನು ಪರಿಗಣಿಸುವುದಕ್ಕೆ 1ನೇ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಲು ನ್ಯಾಯಿಕ ಪರಮಾದೇಶವನ್ನು ಮತ್ತು ಈ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಕೋರಿರುವರು. ಸದರಿ ರಿಟ್ ಅರ್ಜಿಯ ಮುಖಾಂತರ 2ನೇ ಪ್ರತ್ಯರ್ಜಿದಾರರು ಅರ್ಜಿದಾರರ ಅಹವಾಲನ್ನು ಆಲಿಸಿರುವುದಿಲ್ಲ. ಈ ಮೊಕದ್ದಮೆಯ ವಿವರಣೆ/ಪೂರಕಗಳನ್ನು ಒದಗಿಸುವುದಕ್ಕೆ ಅವಕಾಶವನ್ನು ಅರ್ಜಿದಾರರಿಗೆ ನೀಡಿರುವುದಿಲ್ಲ. ಎಪಿಎಂಸಿ ಅಧಿನಿಯಮದ 16(1)(ಎ)

ಪ್ರಕರಣದ ಅಡಿಯಲ್ಲಿ ಅನುಬಂಧ–ಇ ಮೂಲಕ ಅಗತ್ಯಪಡಿಸಿದ ಅರ್ಹತೆಯನ್ನು ಪಡೆದಿರುವುದಿಲ್ಲ ಎಂದು ಆಪಾದಿಸಲಾದ ಕಾರಣದ ಮೇಲೆ ದಿನಾಂಕ: 26.02.2017ರಂದು ಹೊರಡಿಸಿದ ಅರ್ಜಿದಾರರ ನಾಮ ನಿರ್ದೇಶನದ ಪ್ರಶ್ನಿತ ಆದೇಶವನ್ನು ವಜಾ ಮಾಡಲು ಪರಿಗಣಿಸುವುದಕ್ಕಾಗಿ ಸದರಿ ರಿಟ್ ಅರ್ಜಿಯು ಇತ್ಯರ್ಥದಲ್ಲಿದೆ. ಎಪಿಎಂಸಿ ಅಧಿನಿಯಮದ 16(1)(ಎ) ಪ್ರಕರಣ ಈ ಕೆಳಗಿನಂತಿದೆ:

> *16. **ಸದಸ್ಯತ್ವಕ್ಕೆ ಅನರ್ಹತೆಗಳು**.– ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುವೇ ಇತರ ಅನರ್ಹತೆಗಳಿಗೆ ಪ್ರತಿಕೂಲವಾಗದಂತೆ,–*
>
> *(1) ಒಬ್ಬ ವ್ಯಕ್ತಿಯು,– (ಎ) ಅವನು ಅಥವಾ ಅವನು ಪಾಲುಗಾರನಾಗಿರುವಂತಹ ಸಂಸ್ಥೆ ಅಥವಾ ಅವನು ನಿರ್ದೇಶಕನಾಗಿರುವ ನಿಗಮಿತ ನಿಕಾಯವು (ಸಹಕಾರ ಸಂಘದ ಹೊರತಾಗಿ) ಅಥವಾ ಅವನು ಸದಸ್ಯನಾಗಿರುವಂತಹ ಅವಿಭಕ್ತ ಕುಟುಂಬವು ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ವ್ಯಾಪಾರಿಯಾಗಿ, ಕಮಿಷನ್ ಏಜೆಂಟನಾಗಿ, ಬ್ರೋಕರ್‌ನಾಗಿ, ಆಮದುದಾರ ಅಥವಾ ರಫ್ತುದಾರನಾಗಿ ವ್ಯವಹಾರ ಮಾಡಿದರೆ ಅಥವಾ ಚುನಾವಣೆಯ ದಿನಾಂಕದ ನಿಕಟ ಪೂರ್ವದ ಐದು ವರ್ಷಗಳ ಅವಧಿಗೆ ಕಡಿಮೆಯಲ್ಲದ ದಿನಾಂಕದವರೆಗೆ ವ್ಯಾಪಾರಿಯಾಗಿ, ಕಮೀಷನ್ ಏಜೆಂಟನಾಗಿ, ದಲ್ಲಾಳಿಯಾಗಿ, ಆಮದುದಾರ ಅಥವಾ ರಫ್ತುದಾರನಾಗಿ ವ್ಯವಹಾರ ಮಾಡುತ್ತಿದ್ದರೆ, ಕೃಷಿಕರ ಒಬ್ಬ ಪ್ರತಿನಿಧಿಯಾಗಿ;*

8. ಅರ್ಜಿದಾರರ ಪರವಾಗಿನ ಮಾನ್ಯ ನ್ಯಾಯವಾದಿಗಳು ***ಎ. ತಂಗಲ್ ಕುಂಜು ಮುಸಲಿಯಾರ್ –ವಿರುದ್ಧ– ಎಂ. ವೆಂಕಿಟಾಚಲಂ ಪೊಟ್ಟಿ***[1],

1. (1955) 2 ಎಸ್‌ಸಿಆರ್ 1196; ಎಐಆರ್ 1956 ಎಸ್‌ಸಿ 246; (1956) 29 ಐಟಿಆರ್ 349

ಮೊಕದ್ದಮೆಯಲ್ಲಿನ ನಿರ್ಣಯವನ್ನು ಅವಲಂಬಿತವಾಗಿ ನೀಡಿ, ತಮ್ಮ ವಾದಾಂಶದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿ ಅಥವಾ ಸಂವಿಧಾನದ ಉಲ್ಲಂಘನೆಯಾಗುವ ರೀತಿಯಲ್ಲಿ ಒಂದು ಅಧಿನಿಯಮಿತಿಯನ್ನು ಮಾಡಿರುವ ಪಕ್ಷದಲ್ಲಿ ನ್ಯಾಯ ಸಮ್ಮತ ವರ್ಗೀಕರಣವನ್ನು ನಿರ್ಣಯಿಸುವುದಕ್ಕಾಗಿ ಉದ್ದೇಶ ಮತ್ತು ಹೇಳಿಕೆಗಳ ಕಾರಣಗಳನ್ನು ಬಳಸಿಕೊಳ್ಳಬೇಕೆಂದು ಮೊಕದ್ದಮೆಯ ನಿರ್ಣಯದಲ್ಲಿ ಹೇಳಲಾದ ವಾದಾಂಶವನ್ನು ಎತ್ತಿ ಹಿಡಿದಿರುವರು. ***ಪಶ್ಚಿಮ ಬಂಗಾಳ ರಾಜ್ಯ –ವಿರುದ್ಧ– ಭಾರತ ಒಕ್ಕೂಟ*** [2], ಮೊಕದ್ದಮೆಯಲ್ಲಿ ಮಸೂದೆ ಜೊತೆಯಲ್ಲಿ ಉದ್ದೇಶ ಮತ್ತು ಕಾರಣಗಳ ಹೇಳಿಕೆಯು ಇರುತ್ತದೆ. ಸಂಸತ್ತಿನಲ್ಲಿ ಅಧಿನಿಯಮವನ್ನು / ಮಸೂದೆಯನ್ನು ಮಂಡಿಸುವಾಗ ಶಾಸನ ರಚನೆಗೆ ಬೇಕಾಗುವ ಎಲ್ಲಾ ಹಿನ್ನೆಲೆಗಳನ್ನು ಪರಿಮಿತ ಉದ್ದೇಶಕ್ಕಾಗಿ ಅರ್ಥೈಸಿಕೊಳ್ಳಲು ಮತ್ತು ವ್ಯವಹರಣೆಗಳ ಪೂರ್ವ ಅಭಿಪ್ರಾಯಗಳು ಈ ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ದಾಖಲಿತವಾಗಿರುತ್ತದೆ. ಆದುದರಿಂದ, ದಿನಾಂಕ: 26.05.2017ರಂದು 2ನೇ ಸಂಖ್ಯೆಯ ಪ್ರತ್ಯರ್ಜಿದಾರರು ಹೊರಡಿಸಿದ ಪ್ರಶ್ನಿತ ಆದೇಶವನ್ನು ಎಪಿಎಂಸಿ ಅಧಿನಿಯಮದ ಮೇಲೆ ಹೇಳಲಾದ ಉಪಬಂಧಗಳಲ್ಲಿರುವಂತೆ ಈ ರಿಟ್ ಅರ್ಜಿಯಲ್ಲಿ ಒತ್ತಾಯಿಸಲಾದ ಕಾರಣಗಳನ್ನು ಪರಿಗಣಿಸುವ ಮೂಲಕ ಪ್ರಶ್ನಿತ ಆದೇಶವು ವಜಾಗೊಳ್ಳಲು ಬಾದ್ಯವಾಗುತ್ತದೆ ಎಂದು ವಾದಿಸಿರುವರು.

9. ಪ್ರತ್ಯರ್ಜಿದಾರರು ಎಪಿಎಂಸಿ ಅಧಿನಿಯಮದ 16(1)(ಎ) ಪ್ರಕರಣದ ಉಪಬಂಧಗಳು ಚುನಾಯಿತ ಸದಸ್ಯರುಗಳಿಗೆ ಮಾತ್ರ ಅನ್ವಯವಾಗುತ್ತದೆ ಹಾಗೂ ನಾಮ ನಿರ್ದೇಶನದ ಸದಸ್ಯರುಗಳಿಗೆ ಸದರಿ ಪ್ರಕರಣದ ಉಪಬಂಧಗಳು ಅನ್ವಯವಾಗುವುದಿಲ್ಲ ಎಂಬ ಅಂಶವನ್ನು ಗಮನಕ್ಕೆ ತಂದುಕೊಳ್ಳುವಲ್ಲಿ ವಿಫಲವಾಗಿರುತ್ತಾರೆ. ಅರ್ಜಿದಾರರು ಕೃಷಿಕರಾಗಿರುವ ಕಾರಣದಿಂದ ರಾಜ್ಯ ಸರ್ಕಾರವು ಎಪಿಎಂಸಿ ಅಧಿನಿಯಮದ 11(1)(ಎ) ಪ್ರಕರಣದ ಅಡಿಯಲ್ಲಿ ನಾಮ ನಿರ್ದೇಶನಕ್ಕೆ ಅರ್ಹರೆಂದು ಪರಿಗಣಿಸಿದೆ, ಪ್ರತ್ಯರ್ಜಿದಾರರು ಅನುಬಂಧ–ಇ ಯಲ್ಲಿರುವ ಪ್ರಶ್ನಿತ

2. ಎಐಆರ್ 1963 ಎಸ್‌ಸಿ 1241:ಎಐಆರ್ 1964 1 ಎಸ್‌ಸಿಆರ್ 371

ಆದೇಶವನ್ನು ಹೊರಡಿಸುವಾಗ ಅರ್ಜಿದಾರರ ಅಹವಾಲನ್ನು ಆಲಿಸದೆ ಮತ್ತು ಅಹವಾಲನ್ನು ಹೇಳುವುದಕ್ಕೆ ಅವಕಾಶವನ್ನು ನೀಡಿರುವುದಿಲ್ಲ. ಪ್ರತ್ಯರ್ಜಿದಾರರು ಎಪಿಎಂಸಿ ಅಧಿನಿಯಮದ 16(1)(ಎ)ಯ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸುವಲ್ಲಿಯೂ ವಿಫಲವಾಗಿದೆ, ಆತ ಕೃಷಿಕ ಸ್ಥಾನಮಾನದ ಸಂಬಂಧದಲ್ಲಿ ಅರ್ಜಿದಾರರ ವಿವರಣೆ ಕೋರಿ ನಿರೀಕ್ಷಿತ ನೋಟೀಸ್‌ಅನ್ನು ಸಹಾ ಹೊರಡಿಸಿರುವುದಿಲ್ಲ.

10. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಅರ್ಜಿದಾರನು ಅವರು ಮೂಲತಃ ಕೃಷಿಕರಾಗಿವರು ಮತ್ತು ಪಾಲುದಾರಿಕೆ ಸಂಸ್ಥೆಯಲ್ಲಿ ವ್ಯಾಪಾರಿಯಾಗಿರುವ. ವ್ಯಾಪಾರಿ ಪ್ರವರ್ಗದಲ್ಲಿ ಅವರನ್ನು ನಾಮ ನಿರ್ದೇಶನ ಮಾಡಿರುವುದಿಲ್ಲ ಮತ್ತು ಅದು ಅನರ್ಹತೆಗೆ ಬಾದ್ಯವಾಗಿರುವುದಿಲ್ಲ. ಹಾಗಾಗಿ, ದಿನಾಂಕ: 26.05.2017 ರಂದು 2ನೇ ಪ್ರತ್ಯರ್ಜಿದಾರರು ಹೊರಡಿಸಿದ ಅನುಬಂಧ–ಇ ಯಲ್ಲಿರುವ ಪ್ರಶ್ನಿತ ಆದೇಶವನ್ನು, ಅರ್ಜಿದಾರರಿಗೆ ಅವಕಾಶವನ್ನು ನೀಡದಿರುವ ಕಾರಣದ ಮೇಲೆ ಪ್ರಶ್ನಿತ ಆದೇಶವು ವಜಾ ಮಾಡಲು ಬಾದ್ಯವಾಗಿದೆ.

11. ಅರ್ಜಿದಾರರ ಪರವಾಗಿ ಮಂಡಿಸಿದ ವಾದಗಳ ವಿರುದ್ಧವಾಗಿ 5ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ದೃಢವಾಗಿ, ಅಧೀನ ಕಾರ್ಯದರ್ಶಿ, ಸಹಕಾರಿ ಇಲಾಖೆ ಇವರು ಹೊರಡಿಸಿದ ಆದೇಶವನ್ನು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿರುವುದನ್ನು ವಾದಿಸಿರುವರು. ವಾದದಲ್ಲಿ ಅವರು, ಮಾರುಕಟ್ಟೆ ಸಮಿತಿಯ ಸದಸ್ಯರನ್ನು ಹೊರತುಪಡಿಸಿದ ವ್ಯಾಪಾರಿಯಾಗಿರುವ ಆಧಾರದ ಮೇಲೆ ಅರ್ಜಿದಾರರನ್ನು ನಾಮ ನಿರ್ದೇಶನ ಮಾಡಿರುವ ಸಂಬಂಧದಲ್ಲಿ ಎಪಿಎಂಸಿ ಅಧಿನಿಯಮದ 11(1)(ix) ಪ್ರಕರಣದ ಅಡಿಯಲ್ಲಿ ಸಂವಿಧಾನಿಕ ಸಿಂಧುತ್ವದ ಪ್ರಶ್ನೆ ಬರುತ್ತದೆ ಎಂದು ತುಂಬಾ ದೃಢವಾಗಿ ವಾದದಲ್ಲಿ ನಿವೇದಿಸಿರುವರು. ರಾಜ್ಯ ಸರ್ಕಾರವು ನಾಮ ನಿರ್ದೇಶನಕ್ಕೆ ಸಂಬಂಧಪಟ್ಟಂತೆ ದಿನಾಂಕ: 27.07.2016 ರಿಂದ ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ 2016ರ 20ನೇ ಅಧಿನಿಯಮದ ಮೂಲಕ 11(1)(ix) ನೇ ಪ್ರಕರಣವನ್ನು ಪ್ರತ್ಯಾಯೋಜಿಸಿದೆ. ಸುಸಂಗತ ಉಪಬಂಧಗಳಗನುಸಾರವಾಗಿ ಅದನ್ನು ತಪ್ಪಾಗಿ ಗ್ರಹಿಸಲಾಗಿದೆ. ಅದರಂತೆ 11(1)(ix) ಪ್ರಕರಣವು ಈ ಕೆಳಗಿನಂತಿದೆ.

*"(ix) ಮಾರುಕಟ್ಟೆ ಸಮಿತಿಯ ಎಲ್ಲಾ ಸಭೆಗಳಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರುವ, ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಮೂವರು ಸದಸ್ಯರು ಮತ್ತು ಅವರು ರಾಜ್ಯ ಸರ್ಕಾರದ ಇಚ್ಛಾನುಸಾರ ಪದಧಾರಣ ಮಾಡತಕ್ಕದ್ದು"*

12. ಉಪಬಂಧವನ್ನು ಸರಳವಾಗಿ ಓದಿಕೊಳ್ಳುವುದರಿಂದ ಅದು, ಸರ್ಕಾರ ಮೂರು ಸದಸ್ಯರುಗಳನ್ನು ನೇಮಕ ಮಾಡಬಹುದು ಮತ್ತು ಅವರುಗಳು ಕೃಷಿ ವಲಯಕ್ಕೆ ಸೇರಿದ ವ್ಯಕ್ತಿಗಳಿರತಕ್ಕದ್ದು ಎಂದು ಉಪಬಂಧವು ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ ಇಲ್ಲಿ ಅರ್ಜಿದಾರರು ವ್ಯಾಪಾರಿ ವೃತ್ತಿಯವರಾಗಿದ್ದಾರೆ ಅರ್ಜಿದಾರರು ಕೃಷಿಕರಾಗಿದ್ದರೂ ಸಹ 2014ನೇ ವರ್ಷದಿಂದ ವ್ಯಾಪಾರಿಗರಾಗಿರುವ ಲೈಸೆನ್ಸ್ ಹೊಂದಿರುವುದು ಮತ್ತು ಅರ್ಜಿದಾರರು ವಾಸ್ತವ ಸಂಗತಿಯನ್ನು ಮುಚ್ಚಿಟ್ಟಿರುವುದು ಕಂಡು ಬರುತ್ತದೆ. ಅರ್ಜಿದಾರರು ವ್ಯಾಪಾರಿ ಲೈಸೆನ್ಸ್ ಹೊಂದಿರುವ ಸಂಬಂಧದಲ್ಲಿ ಕಾರ್ಯದರ್ಶಿ, ಎಪಿಎಂಸಿ, ಬ್ಯಾಡಗಿ ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮಾಡಿದ ಪತ್ರ ವ್ಯವಹಾರವು ಅನುಬಂಧ – ಆರ್1ರಲ್ಲಿದೆ. ಕಮೀಷನ್ ಏಜೆಂಟರ ಮತದಾರರ ಪಟ್ಟಿಯು ಅನುಬಂಧ ಆರ್–2 ರಲ್ಲಿದೆ. ಖರೀದಿದಾರ ಕ್ಷೇತ್ರದಿಂದ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯು ಅನುಬಂಧ ಆರ್–3ರಲ್ಲಿದೆ. ಹಾಗೂ ರಾಜಕೀಯ ಪ್ರಭಾವದ ಕಾರಣದಿಂದ ತನ್ನ ನಾಮ ಪತ್ರವನ್ನು ಹಿಂದಕ್ಕೆ ಪಡೆದುಕೊಂಡಿದ್ದಾರೆ. ಆದರೆ, ಮೇಲಿನ ವಾಸ್ತವ ಸಂಗತಿಯನ್ನು ಮುಚ್ಚಿಟ್ಟ ಅರ್ಜಿದಾರರು ಎಪಿಎಂಸಿ ಅಧಿನಿಯಮದ 11(1)(ix) ಪ್ರಕರಣದ ಅಡಿಯಲ್ಲಿ ನಾಮ ನಿರ್ದೇಶನ ಪಡೆದಿರುವುದು ಕಂಡು ಬರುತ್ತದೆ.

13. 5ನೇ ಪ್ರತ್ಯರ್ಜಿದಾರರು 4ನೇ ಪ್ರತ್ಯರ್ಜಿದಾರ ಸಂಸ್ಥೆಯ ಚುನಾಯಿತ ಸದಸ್ಯರಾಗಿದ್ದು ಅರ್ಜಿದಾರರನ್ನು ತೆಗೆದು ಹಾಕುವಂತೆ ಸರ್ಕಾರವನ್ನು ವಿನಂತಿಸಿರುವರು. ಸರ್ಕಾರವು ಆ ಕೂಡಲೇ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಹಾಗಾಗಿ, ಆಕೆ ಎಪಿಎಂಸಿ ಅಧಿನಿಯಮದ 11(1)(ix) ಉಪಬಂಧಗಳ

ನಿಬಂಧನೆಗಳನುಸಾರವಾಗಿ ಅರ್ಜಿದಾರರ ನಾಮ ನಿರ್ದೇಶನವನ್ನು ವಜಾ ಮಾಡುವುದಕ್ಕೆ ರಿಟ್ ಅರ್ಜಿ ಸಂಖ್ಯೆ: 103646/2017ರಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿರುವರು. 5ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ***ಖುಸ್ರೋ ಖುರೈಷಿ – ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[3] ಮೊಕದ್ದಮೆಯ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವರು. ಈ ನ್ಯಾಯಾಲಯ ನೀಡಿರುವ ನಿರ್ಣಯವು ಈ ಕೆಳಗಿನಂತಿದೆ:

> *"ಶಾಸನವು ಹಕ್ಕನ್ನು ಸೃಜಿಸುತ್ತದೆ. ನಿಜವಾದ ಶಾಸನವು, ಕೆಲವು ಇತರ ಸ್ಪರ್ಧಿಸುವ ಹಕ್ಕಿನ ಗೈರು ಹಾಜರಿಯಲ್ಲಾಗಲೀ, ಇತರ ಶಾಸನದ ಅಡಿಯಲ್ಲಾಗಲೀ ಅಥವಾ ಭಾರತ ಸಂವಿಧಾನದ ಅಡಿಯಲ್ಲಾಗಲೀ ಸ್ವಾಭಾವಿಕ ನ್ಯಾಯದ ತತ್ವಗಳ ಆಧಾರಿತ ಹಕ್ಕನ್ನು ಶಾಸನವು ಸೃಜಿಸುತ್ತದೆ. ಪರಿಮಿತಗೊಳಿಸುತ್ತದೆ. ಅಥವಾ ಮೊಟಕಗೊಳಿಸುತ್ತದೆ. ಈ ಸಂಬಂಧದಲ್ಲಿ ಅಂಥ ಶಾಸನವನ್ನು ಪರಿಮಿತಗೊಳಿಸಲು ಅಥವಾ ಮೊಟಕುಗೊಳಿಸಲು ಕ್ಲೇಮು ಮಾಡಲು ಬರುವುದಿಲ್ಲ ಎಂದು ನಿರ್ಣಯಿಸುತ್ತದೆ. ಸರ್ಕಾರದ ಇಷ್ಟನುಸಾರದಂತೆ ಶಾಸನದಲ್ಲಿ ಉಪಬಂಧಿಸಿದಂತೆ ಯಾವುದೇ ಪದಕ್ಕೆ ನೇಮಕಗೊಂಡ ವ್ಯಕ್ತಿಯು ಪದಧಾರಣ ವಿಷಯಕ್ಕೊಳಪಟ್ಟಂತೆ ವ್ಯಕ್ತಿಯನ್ನು ಪದದಿಂದ ತೆಗೆದು ಹಾಕುವ ಮೊದಲು ಆ ವ್ಯಕ್ತಿಯ ಅಹವಾಲಿಗೆ ಹಕ್ಕನ್ನು ಇಷ್ಟಾನುಸಾರದ ತತ್ವದ ಅಡಿಯಲ್ಲಿ ವ್ಯಕ್ತಿಯನ್ನು ತೆಗೆದು ಹಾಕಿದ್ದರೆ, ಅದನ್ನು ಕ್ಲೇಮು ಮಾಡಬಾರದು."*

14. ಮೇಲೆ ಹೇಳಲಾದ ಉಪಬಂಧ ಅಧಿನಿಯಮ ಅಡಿಯಲ್ಲಿ ಮತದಾನದ ಹಕ್ಕನ್ನು ವಿಪುಲವಾಗಿ ಸ್ಪಷ್ಟಗೊಳಿಸುತ್ತದೆ. ಅಧಿನಿಯಮವು ಶಾಸನಾತ್ಮಕ ಹಕ್ಕನ್ನು ಸೃಜಿಸುತ್ತದೆ. 'ಎಪಿಎಂಸಿ ಅಧಿನಿಯಮದ' 15ನೇ ಪ್ರಕರಣ ಮತ್ತು 'ಎಪಿಎಂಸಿ

3. 2012 (5) ಕರ್ನಾಟಕ ಎಲ್.ಜೆ. 116(ಡಿಬಿ)

ನಿಯಮಗಳ 3ನೇ ನಿಯಮದಲ್ಲಿ ಮತದಾನಕ್ಕೆ ಅರ್ಹತೆಗಳನ್ನು ವಿನಿಯಮಿಸಿದೆ. ಅದು ಕೆಳಗಿನಂತಿದೆ:

***15. ಚುನಾವಣಾ ಅಭ್ಯರ್ಥಿಗಳ ಅರ್ಹತೆ.–***

*ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಅನರ್ಹನಾಗಿರುವ ಹೊರತು, ಮಾರುಕಟ್ಟೆ ಸಮಿತಿಯ ಸದಸ್ಯನಾಗಿ ಕೆಳಕಂಡ ಚುನಾವಣಾ ಕ್ಷೇತ್ರಗಳಿಂದ ಚುನಾಯಿತನಾಗಲು ಅರ್ಹನಾಗಿರತಕ್ಕದ್ದು, ಎಂದರೆ:–*

*(i) ಮಾರುಕಟ್ಟೆ ಪ್ರದೇಶದ ಕೃಷಿಕರ ಚುನಾವಣಾ ಕ್ಷೇತ್ರಗಳ ಪೈಕಿ ಯಾವುದೇ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವನ ಹೆಸರು ಇದ್ದರೆ, ಆ ಕೃಷಿಕರ ಚುನಾವಣಾ ಕ್ಷೇತ್ರ;*

*ಪರಂತು, ಒಬ್ಬ ವ್ಯಕ್ತಿಯು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳು ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಅಥವಾ ಮಹಿಳೆಯರಿಗಾಗಿ ಮೀಸಲಿಡಲಾದ ಕೃಷಿಕರ ಚುನಾವಣಾ ಕ್ಷೇತ್ರಗಳಿಂದ ಚುನಾಯಿತನಾಗುವುದಕ್ಕೆ, ಅಂಥ ವ್ಯಕ್ತಿಯು, ಆ ಜಾತಿಗಳಿಗೆ, ಪಂಗಡಗಳಿಗೆ ಅಥವಾ ವರ್ಗಗಳಿಗೆ ಸೇರಿದವನಾಗಿದ್ದ ಹೊರತು ಅಥವಾ ಮಹಿಳೆಯಾಗಿದ್ದ ಹೊರತು, ಅರ್ಹನಾಗಿರತಕ್ಕದ್ದಲ್ಲ;*

*(ii) ಮಾರುಕಟ್ಟೆ ಪ್ರದೇಶದ ವ್ಯಾಪಾರಿಗಳ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವನ ಹೆಸರು ಇದ್ದರೆ, ವ್ಯಾಪಾರಿಗಳ ಚುನಾವಣಾ ಕ್ಷೇತ್ರ; ಮತ್ತು*

*(iii) XXX* .

***೩. ಮತನೀಡಲು ಅರ್ಹರಾದ ವ್ಯಕ್ತಿಗಳು.–***

*(1) ಮಾರುಕಟ್ಟೆ ಪ್ರದೇಶದಲ್ಲಿ ವಾಸವಾಗಿರುವ ಮತ್ತು ಯಾವ ವರ್ಷದಲ್ಲಿ ಮತದಾರರ ಪಟ್ಟಿಯನ್ನು ತಯಾರಿಸಲಾಗುವುದೋ ಆ ವರ್ಷದ ಜನವರಿ 1ರಂದು [ಹದಿನೆಂಟು] ವರ್ಷ ವಯಸ್ಸಿಗೆ ಕಡಿಮೆ ಇಲ್ಲದ ವಯಸ್ಸಿನವರಾಗಿರುವ ಎಲ್ಲಾ ಕೃಷಿಕರು, ಕೃಷಿಕರ ಚುನಾವಣಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.*

*(2) ಯಾರೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಕೃಷಿಕರ ಚುನಾವಣಾ ಕ್ಷೇತ್ರಗಳ ಮತದಾರರ ಪಟ್ಟಿಗಳಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದಲ್ಲ. ಅವನ ಹೆಸರನ್ನು ತಪ್ಪಾಗಿ ಅಥವಾ ಅನ್ಯಥಾ ಎರಡು ಅಥವಾ ಹೆಚ್ಚು ಚುನಾವಣಾ ಕ್ಷೇತ್ರಗಳ ಪಟ್ಟಿಗಳಲ್ಲಿ ನಮೂದಿಸಿದ್ದಾಗ್ಯೂ, ಅವನು ಒಂದು ಚುನಾವಣಾ ಕ್ಷೇತ್ರದಲ್ಲಿ ಮಾತ್ರ ತನ್ನ ಮತವನ್ನು ಚಲಾಯಿಸತಕ್ಕದ್ದು. ಅವನು ಎರಡು ಅಥವಾ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ತನ್ನ ಮತವನ್ನು ಚಲಾಯಿಸಿದರೆ, ಆ ಎಲ್ಲಾ ಚುನಾವಣಾ ಕ್ಷೇತ್ರಗಳಲ್ಲಿ ದಾಖಲಾದ ಅವನ ಮತಗಳು ಶೂನ್ಯವಾಗಿರುವುದಾಗಿ ಭಾವಿಸತಕ್ಕದ್ದು.*

*(3) ಮಾರುಕಟ್ಟೆ ಪ್ರದೇಶದಲ್ಲಿರುವ ಚಿಲ್ಲರೆ ವ್ಯಾಪಾರಿಗಳಲ್ಲದ ಇತರ ಎಲ್ಲಾ ವ್ಯಾಪಾರಿಗಳು, ವ್ಯಾಪಾರಿಗಳ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನಮೂದಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.*

*(4) xxxxx*

*(5) ಯಾವುದೇ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಯಾರೇ ವ್ಯಕ್ತಿಯ ಹೆಸರನ್ನು ಒಂದಕ್ಕಿಂತ ಹೆಚ್ಚು ಬಾರಿ ಸೇರಿಸಿದ್ದರೂ ಅವನು ಆ ಚುನಾವಣಾ ಕ್ಷೇತ್ರದ ಯಾವುದೇ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮತವನ್ನು ಚಲಾಯಿಸತಕ್ಕದ್ದಲ್ಲ ಮತ್ತು ಅವನು ಒಂದಕ್ಕಿಂತ ಹೆಚ್ಚು ಬಾರಿ ಮತ ನೀಡಿದಲ್ಲಿ ಆ ಚುನಾವಣಾ ಕ್ಷೇತ್ರದಲ್ಲಿ ದಾಖಲಾದ ಅವನ ಎಲ್ಲಾ ಮತಗಳು ಶೂನ್ಯವಾಗಿರುವುದಾಗಿ ಭಾವಿಸತಕ್ಕದ್ದು.*

5ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮೇಲಿನ ಉಪಬಂಧಗಳ ಅಭಿವ್ಯಕ್ತಿಗಳ ಅಭಿಪ್ರಾಯೋಕ್ತಿಯಲ್ಲಿ ಅರ್ಜಿದಾರರು ದಾಖಲಿಸಿದ ರಿಟ್ ಅರ್ಜಿಯಲ್ಲಿ ಯಾವುದೇ ಗುಣಾರ್ಹತೆಗಳು ಕಂಡು ಬರುವುದಿಲ್ಲವೆಂದು ರಿಟ್ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿರುವರು.

15. 1 ರಿಂದ 3ರ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಅರ್ಜಿದಾರರ ಪರವಾಗಿ ಅರ್ಜಿದಾರರ ನ್ಯಾಯವಾದಿಗಳು ಅರ್ಜಿದಾರರನ್ನು ದಿನಾಂಕ: 08.02.2017 ಅಧಿಸೂಚನೆ ಸಂಖ್ಯೆ: ಎಸ್ಇ69 ಎಂಆರ್ಇ 2017 ನೋಡಿ ಎಪಿಎಂಸಿ ಅಧಿನಿಯಮದ 11(1)(ix) ಪ್ರಕರಣದ ಉಪಬಂಧಗಳ ಪ್ರಕಾರದಂತೆ ಅರ್ಜಿದಾರರನ್ನು ನಾಮ ನಿರ್ದೇಶನ ಮಾಡಲಾಗಿದೆ. ಅದರಲ್ಲಿರುವಂತೆ ಮಾರುಕಟ್ಟೆ ಸಮಿತಿಯ ಸದಸ್ಯರಾಗಿರುವುದರಿಂದ ಸಾಧ್ಯವಾದಷ್ಟು ವ್ಯಾಪಾರಿಗಳನ್ನು ಹೊರತುಪಡಿಸುವ ಎಪಿಎಂಸಿ ಅಧಿನಿಯಮದ 16(1)(ಎ) ಪ್ರಕರಣದಲ್ಲಿರುವಂತೆ ಎಪಿಎಂಸಿ ಸಮಿತಿಯ ಸದಸ್ಯರಾಗಲು ನಾಮ ನಿರ್ದೇಶನಗೊಳ್ಳಲು ಅರ್ಜಿದಾರರು ಅನರ್ಹರಾಗಿರುವ ಅಂಶವನ್ನು ಅವರು ಸಲ್ಲಿಸಿದ ಅರ್ಜಿಯಲ್ಲಿ ಎತ್ತಿ ಹಿಡಿಯಲಾಗಿದೆ. 3ನೇ ಸಂಖ್ಯೆಯ ಪ್ರತ್ಯರ್ಜಿದಾರರಾಗಿರುವ ಎಪಿಎಂಸಿಯ ನಿರ್ದೇಶಕರು ಅರ್ಜಿದಾರರನ್ನು ಪರಿಶೀಲಿಸಿರುತ್ತಾರೆ. ಪರಿಶೀಲಿಸಿದ ನಂತರದಲ್ಲಿ 4ನೇ ಪ್ರತ್ಯರ್ಜಿದಾರರಿಗೆ ಅರ್ಜಿಯನ್ನು

ದಾಖಲಿಸಿರುತ್ತಾರೆ. ಅದರಂತೆ 4ನೇ ಪ್ರತ್ಯರ್ಜಿದಾರರು ಎಪಿಎಂಸಿ ಅಧಿನಿಯಮದ 11(1)(ix) ಪ್ರಕರಣದಲ್ಲಿರುವಂತೆ ಅರ್ಜಿದಾರರು ಮುಂದುವರೆಯುವುದಕ್ಕೆ ಅನರ್ಹರಾಗಿರುವರೆಂದು ದಿನಾಂಕ: 27.02.2017ರಂದು ಸರ್ಕಾರಕ್ಕೆ ವರದಿಯನ್ನು ಮಾಡಿರುತ್ತಾರೆ. ಅದಕ್ಕನುಸಾರವಾಗಿ, ಅರ್ಜಿದಾರರ ನಾಮ ನಿರ್ದೇಶನವು ರದ್ದುಗೊಂಡಿರುತ್ತದೆ. ರಿಟ್ ಅರ್ಜಿದಾರರ ಮೂಲ ವಾದಾಂಶವೇನೆಂದರೆ, ಎಪಿಎಂಸಿಯಲ್ಲಿ ಅರ್ಜಿದಾರರ ಸದಸ್ಯತ್ವದ ನಾಮ ನಿರ್ದೇಶನವನ್ನು ತೆಗೆದು ಹಾಕುವಂತಹ ತತ್ವವನ್ನು ಹೊಂದಿರುವಂತಹ ಎಪಿಎಂಸಿ ಅಧಿನಿಯಮದ 16(1)(ಎ) ಉಪಬಂಧವನ್ನು ಉಲ್ಲೇಖಿಸಿರುವರು ಅದು ಈ ಮುಂದಿನಂತಿದೆ:

*"16. **ಸದಸ್ಯತ್ವಕ್ಕೆ ಅನರ್ಹತೆಗಳು.**–*

*ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುವೇ ಇತರ ಅನರ್ಹತೆಗಳಿಗೆ ಪ್ರತಿಕೂಲವಾಗದಂತೆ,–*

*(1) ಒಬ್ಬ ವ್ಯಕ್ತಿಯು,–*

*(ಎ) ಅವನು ಅಥವಾ ಅವನು ಪಾಲುಗಾರನಾಗಿರುವಂತಹ ಸಂಸ್ಥೆ ಅಥವಾ ಅವನು ನಿರ್ದೇಶಕನಾಗಿರುವ ನಿಗಮಿತ ನಿಕಾಯವು (ಸಹಕಾರ ಸಂಘದ ಹೊರತಾಗಿ) ಅಥವಾ ಅವನು ಸದಸ್ಯನಾಗಿರುವಂತಹ ಅವಿಭಕ್ತ ಕುಟುಂಬವು ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ವ್ಯಾಪಾರಿಯಾಗಿ, ಕಮೀಷನ್ ಏಜೆಂಟನಾಗಿ, ಬ್ರೋಕರ್‌ನಾಗಿ, ಆಮದುದಾರ ಅಥವಾ ರಫ್ತುದಾರನಾಗಿ ವ್ಯವಹಾರ ಮಾಡಿದರೆ ಅಥವಾ ಚುನಾವಣೆಯ ದಿನಾಂಕದ ನಿಕಟ ಪೂರ್ವದ ಐದು ವರ್ಷಗಳ ಅವಧಿಗೆ ಕಡಿಮೆಯಲ್ಲದ ದಿನಾಂಕದವರೆಗೆ ವ್ಯಾಪಾರಿಯಾಗಿ, ಕಮೀಷನ್ ಏಜೆಂಟನಾಗಿ, ದಲ್ಲಾಳಿಯಾಗಿ, ಆಮದುದಾರ ಅಥವಾ*

*ರಫ್ತುದಾರನಾಗಿ ವ್ಯವಹಾರ ಮಾಡುತ್ತಿದ್ದರೆ, ಕೃಷಿಕರ ಒಬ್ಬ ಪ್ರತಿನಿಧಿಯಾಗಿ;"*

16. ಅರ್ಜಿದಾರರು ಎಪಿಎಂಸಿ ನಿರ್ದೇಶಕರಿಂದ ಲೆಸೆನ್ಸ್ ಹೊಂದಿರುವ ಹಾವೇರಿಯಲ್ಲಿರುವ ಮೆ॥ ಬೆಟಗೆರಿ ವಾಣಿಜ್ಯ ಕಂಪನಿಯಲ್ಲಿ ಪಾಲುದಾರಿಕೆ ಹೊಂದಿಲ್ಲವೆಂದು ರುಜುವಾತು ಪಡಿಸಲು ವಿಫಲರಾಗಿರುವರು. ಈ ಸಂಬಂಧದಲ್ಲಿ ಅರ್ಜಿದಾರರ ಹೆಸರು ಹಾವೇರಿಯ ವ್ಯಾಪಾರಸ್ಥರ "ಮತದಾರ"ರ ಪಟ್ಟಿಯಲ್ಲಿ ಕ್ರ.ಸಂ.3ರಲ್ಲಿರುವುದನ್ನು 4ನೇ ಪ್ರತ್ಯರ್ಜಿದಾರರು ಸ್ಪಷ್ಟಪಡಿಸಿರುತ್ತಾರೆ. ಆದುದರಿಂದ ಅರ್ಜಿದಾರರು ಕಾನೂನಿನ ಉಪಬಂಧಗಳಿಗನುಸಾರವಾಗಿ ಅಂಥ ಪ್ರಶ್ನಿತ ಅಧಿಸೂಚನೆಯ ಪ್ರಕಾರದಂತೆ ಮೇಲಿನ ಉಪಬಂಧಗಳ ಅಡಿಯಲ್ಲಿ ಅರ್ಜಿದಾರರು ಅನರ್ಹತೆಗೆ ಒಳಗಾಗುವರು. ಆದುದರಿಂದಲೇ, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ರಿಟ್ ಅರ್ಜಿಯನ್ನು ವಜಾ ಮಾಡುವಂತೆ ಪ್ರಾರ್ಥಿಸಿರುವರು.

17. ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಮಾನ್ಯ ನ್ಯಾಯವಾದಿಗಳ ವಾದವನ್ನು, ಅದರಂತೆ ಪ್ರತ್ಯರ್ಜಿದಾರರಾದ 1 ರಿಂದ 3 ಇವರ ಪರವಾಗಿ ವಾದ ಮಂಡಿಸಿದ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದವನ್ನು ಸಂಬಂಧಪಟ್ಟ 5ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ವಾದವನ್ನು ಗಮನಕ್ಕೆ ತಂದುಕೊಂಡಾಗ ಪಕ್ಷಕಾರರ ನ್ಯಾಯವಾದಿಗಳು ಎಪಿಎಂಸಿ ಅಧಿನಿಯಮದ ಪ್ರಕರಣದ ಉಪಬಂಧಗಳು ಉಲ್ಲೇಖಿಸಿರುವುದು ಕಂಡು ಬರುತ್ತದೆ. ಅದು ಈ ಮುಂದಿನಂತಿದೆ:

***"16. ಸದಸ್ಯತ್ವಕ್ಕೆ ಅನರ್ಹತೆಗಳು.-***

*ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುವೇ ಇತರ ಅನರ್ಹತೆಗಳಿಗೆ ಪ್ರತಿಕೂಲವಾಗದಂತೆ,-*

*(1) ಒಬ್ಬ ವ್ಯಕ್ತಿಯು,-*

*(ಎ) ಅವನು ಅಥವಾ ಅವನು ಪಾಲುಗಾರನಾಗಿರುವಂತಹ ಸಂಸ್ಥೆ ಅಥವಾ ಅವನು ನಿರ್ದೇಶಕನಾಗಿರುವ ನಿಗಮಿತ ನಿಕಾಯವು (ಸಹಕಾರ ಸಂಘದ ಹೊರತಾಗಿ) ಅಥವಾ ಅವನು ಸದಸ್ಯನಾಗಿರುವಂತಹ ಅವಿಭಕ್ತ ಕುಟುಂಬವು ಯಾವುದೇ ಮಾರುಕಟ್ಟೆ ಪ್ರದೇಶದಲ್ಲಿ ವ್ಯಾಪಾರಿಯಾಗಿ, ಕಮಿಷನ್ ಏಜೆಂಟನಾಗಿ, ಬ್ರೋಕರ್‌ನಾಗಿ, ಆಮದುದಾರ ಅಥವಾ ರಫ್ತುದಾರನಾಗಿ ವ್ಯವಹಾರ ಮಾಡಿದರೆ ಅಥವಾ ಚುನಾವಣೆಯ ದಿನಾಂಕದ ನಿಕಟ ಪೂರ್ವದ ಐದು ವರ್ಷಗಳ ಅವಧಿಗೆ ಕಡಿಮೆಯಲ್ಲದ ದಿನಾಂಕದವರೆಗೆ ವ್ಯಾಪಾರಿಯಾಗಿ, ಕಮೀಷನ್ ಏಜೆಂಟನಾಗಿ, ದಲ್ಲಾಳಿಯಾಗಿ, ಆಮದುದಾರ ಅಥವಾ ರಫ್ತುದಾರನಾಗಿ ವ್ಯವಹಾರ ಮಾಡುತ್ತಿದ್ದರೆ, ಕೃಷಿಕರ ಒಬ್ಬ ಪ್ರತಿನಿಧಿಯಾಗಿ;*

*(ಬಿ) ಅವನು ಲೈಸನ್ಸ್ ಪಡೆದ ವ್ಯಾಪಾರಿಯಾಗಿರುವುದು ಕೊನೆಗೊಂಡಿದ್ದರೆ, ವ್ಯಾಪಾರಿಗಳ ಪ್ರತಿನಿಧಿಯಾಗಿ - ಮಾರುಕಟ್ಟೆ ಸಮಿತಿಯ ಸದಸ್ಯನಾಗಿ ಚುನಾಯಿತನಾಗಲು ಅಥವಾ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.*

*(ಸಿ) xxxx*

*(2) ಒಬ್ಬ ವ್ಯಕ್ತಿಯು,-*

*(ಎ) ಅವನು ಇಪ್ಪತ್ತೊಂದು ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದರೆ; ಅಥವಾ*

*(ಬಿ) ಕ್ರಿಮಿನಲ್ ನ್ಯಾಯಾಲಯದಿಂದ, ಕಾರಾವಾಸ ಶಿಕ್ಷೆಗೆ ಒಳಗಾಗಿದ್ದು,*

*(i) ಅವನು ನೈತಿಕ ಅಧಃಪತನವನ್ನು ಒಳಗೊಂಡಿರುವ ಮತ್ತು ಆರು ತಿಂಗಳಿಗೆ ಮೀರುವ ಅವಧಿಯ ಕಾರಾವಾಸ ಶಿಕ್ಷೆಯಿಂದ ದಂಡನೀಯ ವಾಗುವಂಥ ಅಪರಾಧಕ್ಕಾಗಿ;*

*(ii) ಕರ್ನಾಟಕ ವಿವಾಹಗಳ ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1976ರ 20, 21 ಅಥವಾ 22ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ;*

*ಆ ತರುವಾಯ ಅಂಥ ಶಿಕ್ಷೆಯನ್ನು ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ಮಾಫಿ ಮಾಡಿರದಿದ್ದರೆ;*

*(ಬಿಎ) ಈ ಅಧಿನಿಯಮದ 114, 117 ಮತ್ತು 118ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿದ್ದು ಅಂಥ ಅಪರಾಧ ನಿರ್ಣಯವನ್ನು ತರುವಾಯ ತಳ್ಳಿಹಾಕಿರದಿದ್ದರೆ; ಅಥವಾ*

*(ಸಿ) ದಂಡ ಪ್ರಕ್ರಿಯಾ ಸಂಹಿತೆ, 1973 ರ (1974 ರ ಕೇಂದ್ರ ಅಧಿನಿಯಮ 2) 110ನೇ ಪ್ರಕರಣದ ಮೇರೆಗೆ ಹೂಡಲಾದ ವ್ಯವಹರಣೆಗಳಲ್ಲಿ ಆ ಸಂಹಿತೆಯ 108ನೇ ಪ್ರಕರಣದ ಮೇರೆಗೆ ಅವನ ವಿರುದ್ಧ ಆದೇಶವನ್ನು ಹೊರಡಿಸಲಾಗಿದ್ದು, ಆ ತರುವಾಯ ಅಂತಹ ಆದೇಶವನ್ನು ರದ್ದುಗೊಳಿಸಿರದಿದ್ದರೆ ಅಥವಾ ತಳ್ಳಿ ಹಾಕಿರದಿದ್ದರೆ; ಅಥವಾ*

*(ಡಿ) ಅವನು ಅನನ್ಮುಕ್ತ ದಿವಾಳಿಯಾಗಿದ್ದರೆ; ಅಥವಾ*

*(ಇ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದರೆ; ಅಥವಾ*

*(ಎಫ್) ಅವನು ಯಾವುದೇ ಮಾರುಕಟ್ಟೆ ಸಮಿತಿಯ, ಸ್ಥಳೀಯಪ್ರಾಧಿಕಾರದ ಅಥವಾ ಸಹಕಾರ ಸಂಘದ ನೌಕರನಾಗಿದ್ದರೆ ಅಥವಾ ತೂಕ ಮಾಡುವವನೆಂದು, ಅಳತೆಗಾರನೆಂದು ಸರ್ವೇಯರ್‌ನೆಂದು ಅಥವಾ ಹಮಾಲನೆಂದು ಮಾರುಕಟ್ಟೆ ಸಮಿತಿಯಿಂದ ಲೈಸೆನ್ಸ್ ಪಡೆದವನಾಗಿದ್ದರೆ; ಅಥವಾ*

*(ಜಿ) ಇದರಲ್ಲಿ ಇನ್ನು ಮುಂದೆ ಉಪಬಂಧಿತವಾದಂತೆ ಹೊರತು, ಮಾರುಕಟ್ಟೆ ಸಮಿತಿಯ ಆದೇಶದ ಮೂಲಕ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ, ಅಥವಾ ಮಾರುಕಟ್ಟೆ ಸಮಿತಿಯೊಂದಿಗೆ ಅಥವಾ ಅದರ ಮೇರೆಗೆ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ನಿಯೋಜನೆಯ ಯಾವುದೇ ಕರಾರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಂದಿದ್ದರೆ; ಅಥವಾ*

*(ಹೆಚ್) ಮಾರುಕಟ್ಟೆ ಸಮಿತಿಯು ಪರವಾಗಿ ಅವನು ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮಾರುಕಟ್ಟೆ ಸಮಿತಿಯು ವಿರುದ್ಧ ನ್ಯಾಯವಾದಿಯಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ; ಅಥವಾ*

*(ಹೆಚ್‌ಹೆಚ್) ಮಾರಾಟದ ದಿನಾಂಕದಿಂದ ಮಾರಾಟದ ಉತ್ಪತ್ತಿಯ ಮೊತ್ತವನ್ನು ಅಥವಾ ಮಾರಾಟಗಾರನಿಗೆ ಬಾಕಿ ಇರುವ ಇತರ ಮೊತ್ತವನ್ನು ಏಳು ದಿನಗಳು ಅಥವಾ ಅದಕ್ಕಿಂತ ಹೆಚ್ಚು*

*ದಿನಗಳ ಅವಧಿಯುವರೆಗೆ ಸಂದಾಯ ಮಾಡಲು ತಪ್ಪಿದ ಬಾಕಿದಾರನಾದರೆ; ಅಥವಾ*

*(ಐ) ಮಾರುಕಟ್ಟೆ ಸಮಿತಿಗೆ ಬಾಕಿ ಇರುವ ಯಾವುದೇ ಫೀಜು ಅಥವಾ ಇತರ ಮೊತ್ತವನ್ನು ಸಂದಾಯ ಮಾಡುವ ಬಗ್ಗೆ ಅವನಿಗೆ ಬಿಲ್ಲನ್ನು ಒಪ್ಪಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿ ಮೀರಿದ ನಂತರವೂ ಅದನ್ನು ಸಂದಾಯ ಮಾಡಲು ತಪ್ಪಿದರೆ, ಅವನು ಮಾರುಕಟ್ಟೆ ಸಮಿತಿಯ ಸದಸ್ಯನಾಗಿ ಚುನಾಯಿತನಾಗಲು ಅಥವಾ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು:*

*ಪರಂತು,–*

*(i) ಸಂದರ್ಭಾನುಸಾರ ಅಂತಹ ಶಿಕ್ಷೆಯ ಅಥವಾ ಅಪರಾಧ ನಿರ್ಣಯದ ದಿನಾಂಕದಿಂದ ಐದು ವರ್ಷಗಳು ಮುಗಿದ ತರುವಾಯ (ಬಿ) ಮತ್ತು (ಬಿಎ) ಉಪಖಂಡಗಳಲ್ಲಿ ಹೇಳಿದ ಅನರ್ಹತೆಯು, ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು;*

*(ii) ಯಾವ ಅವಧಿಗೆ ಸಂಬಂಧಿಸಿ ಭದ್ರತೆಯನ್ನು ಒದಗಿಸುವಂತೆ ಒಬ್ಬ ವ್ಯಕ್ತಿಗೆ ಆದೇಶ ನೀಡಲಾಗಿತ್ತೋ ಆ ಅವಧಿಯು ಮುಕ್ತಾಯವಾದ ತರುವಾಯ (ಸಿ) ಉಪಖಂಡದಲ್ಲಿ ಹೇಳಿದ ಅನರ್ಹತೆಯು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು;*

*(iii) ಒಬ್ಬ ವ್ಯಕ್ತಿಯು,–*

*(ಎ) ಯಾವುದೇ ಜಂಟಿ ಸ್ಟಾಕ್ ಕಂಪನಿಯಲ್ಲಿ ಷೇರನ್ನು ಹೊಂದಿರುವ ಅಥವಾ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ ನೋಂದಾಯಿತವಾದ ಯಾವುದೇ ಸಂಘದಲ್ಲಿ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಮಾರುಕಟ್ಟೆ ಸಮಿತಿಯೊಂದಿಗೆ ಕರಾರು ಮಾಡಿಕೊಂಡಿರುವ ಅಥವಾ ಅದರಿಂದ ಅಥವಾ ಅದರ ಪರವಾಗಿ ನಿಯೋಜಿತವಾದ ಯಾವುದೇ ಸಹಕಾರ ಸಂಘದಲ್ಲಿ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಕಾರಣ; ಅಥವಾ*

*(ಬಿ) ಮಾರುಕಟ್ಟೆ ಸಮಿತಿಯಿಂದ ಅಥವಾ ಅದರ ಪರವಾಗಿ ಎತ್ತಲಾಗುವ ಯಾವುದೇ ಡಿಬೆಂಚರನ್ನು ಹೊಂದಿರುವ ಅಥವಾ ಸಾಲದ ಸಂಬಂಧದಲ್ಲಿ ಅನ್ಯಥಾ ಸಂಬಂಧಪಡುವ ಕಾರಣ – (ಜಿ) ಖಂಡದ ಮೇರೆಗೆ ಅನರ್ಹತೆಗೆ ಒಳಗಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.*

**ಅದರಂತೆ ಎಪಿಎಂಸಿ ಅಧಿನಿಯಮದ 17ನೇ ಪ್ರಕರಣದ ಉಪಬಂಧಗಳು ಈ ಮುಂದಿನಂತಿದೆ:**

*17. **ಹಾಲಿ ಸದಸ್ಯರ ಅನರ್ಹತೆ.**–*

*(1) ಮಾರುಕಟ್ಟೆ ಸಮಿತಿಯ ಯಾರೇ ಸದಸ್ಯನು,–*

*(ಎ) 16ನೇ ಪ್ರಕರಣದಲ್ಲಿ ನಮೂದಿಸಿದ ಯಾವುದೇ ಅನರ್ಹತೆಗಳಿಗೆ ಒಳಪಟ್ಟರೆ; ಅಥವಾ*

(ಬಿ) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಯಾರೇ ಒಬ್ಬ ಸದಸ್ಯನು ಮಾರುಕಟ್ಟೆ ಸಮಿತಿಯ ಅನುಮತಿ ಪಡೆಯದೆ, ಸತತವಾಗಿ ಮೂರಕ್ಕಿಂತ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ ಅವನ ಸ್ಥಾನವು ಸಂದರ್ಭಾನುಸಾರ ಖಾಲಿಯಾಗುವುದೆಂದು ಅಥವಾ ಖಾಲಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಆ ಸಂಗತಿಯನ್ನು ಮಾರುಕಟ್ಟೆ ಸಮಿತಿಯು ಆ ಕೂಡಲೇ ಆ ಸದಸ್ಯನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು:

ಪರಂತು, ಸದಸ್ಯನು ತಾನು ಗೈರು ಹಾಜರಾಗಲು ಅನುಮತಿ ಕೋರಿ ಮಾರುಕಟ್ಟೆ ಸಮಿತಿಗೆ ಅರ್ಜಿಯನ್ನು ಸಲ್ಲಿಸಿದ್ದು ಮಾರುಕಟ್ಟೆ ಸಮಿತಿಯು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ಆ ಬಗ್ಗೆ ತನ್ನ ನಿರ್ಣಯವನ್ನು ಅರ್ಜಿದಾರನಿಗೆ ತಿಳಿಸುವುದಕ್ಕೆ ತಪ್ಪಿದಲ್ಲಿ, ಕೋರಿರುವ ರಜೆಯನ್ನು ಮಾರುಕಟ್ಟೆ ಸಮಿತಿಯು ಮಂಜೂರು ಮಾಡಿದೆ ಎಂದು ಭಾವಿಸತಕ್ಕದ್ದು.

(2) ಯಾವನೇ ಸದಸ್ಯನು (1)ನೇಯ ಉಪಪ್ರಕರಣದ ಮೇರೆಗೆ ಅನರ್ಹನಾಗಿರುವನೇ ಅಥವಾ ಅನರ್ಹತೆಗೆ ಗುರಿಯಾಗಿರುವನೇ ಎಂಬ ಪ್ರಶ್ನೆ ಉದ್ಭವಿಸಿದಾಗಲೆಲ್ಲ ಕೃಷಿ ಮಾರುಕಟ್ಟೆ ನಿರ್ದೇಶಕನು ಸ್ವಪ್ರೇರಣೆಯಿಂದ ಅಥವಾ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯ ವರದಿಯ ಮೇಲೆ ಅಥವಾ ಅನ್ಯಥಾ ಮತ್ತು ಆ ಬಗ್ಗೆ ಸಂಬಂಧಪಟ್ಟ ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸುವಂತಹ ವಿಚಾರಣೆಯನ್ನು ನಡೆಸಿದ ನಂತರ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

*(3) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ ಮತ್ತು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1991 ಜಾರಿಗೆ ಬಂದ ದಿನಾಂಕದಂದು ಡೆಪ್ಯೂಟಿ ಕಮೀಷನರ್‌ನ ಮುಂದೆ 2ನೇ ಉಪಪ್ರಕರಣದ ಮೇರೆಗೆ ಇತ್ಯರ್ಥದಲ್ಲಿರುವ ಯಾವುದೇ ಪ್ರಶ್ನೆಯು ಕೃಷಿಮಾರುಕಟ್ಟೆ ನಿರ್ದೇಶಕನಿಗೆ ವರ್ಗಾವಣೆಯಾಗಿರತಕ್ಕದ್ದು ಮತ್ತು ಅಂಥ ಪ್ರಶ್ನೆಯನ್ನು ಅವನಿಗೆ ವರದಿ ಮಾಡಿದ್ದರೆ ಅಥವಾ ಆ ಕುರಿತು ಅವನೇ ಕ್ರಮ ಪ್ರಾರಂಭಿಸಿದ್ದರೆ ಹೇಗೋ ಹಾಗೆ ಅದು ಇತ್ಯರ್ಥವಾಗತಕ್ಕದ್ದು.*

*(4) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮ, 2013 ಜಾರಿಗೆ ಬಂದ ದಿನಾಂಕದಂದು ಸಿವಿಲ್ ನ್ಯಾಯಾಧೀಶರ ಮುಂದೆ ಇತ್ಯರ್ಥದಲ್ಲಿರುವ ಅಧಿನಿಯಮದ 21ನೇ ಪ್ರಕರಣದ (ಎ) ಖಂಡದ ಅಡಿಯಲ್ಲಿ ವ್ಯಾಪ್ತಿಯೊಳಗೆ ಬರುವ ಯಾವುದೇ ಚುನಾವಣಾ ಅರ್ಜಿಗಳು ಇದ್ದ ಪಕ್ಷದಲ್ಲಿ ಅಂಥ ಅರ್ಜಿಗಳನ್ನು ಕೃಷಿ ಮಾರುಕಟ್ಟೆ ನಿರ್ದೇಶಕರಿಗೆ ವರ್ಗಾಯಿಸತಕ್ಕದ್ದು ಮತ್ತು ಅಂಥ ಅರ್ಜಿಗಳನ್ನು ಕೃಷಿ ಮಾರುಕಟ್ಟೆ ನಿರ್ದೇಶಕರ ಮುಂದೆನೇ ದಾಖಲಿಸತಕ್ಕದ್ದು ಮತ್ತು ಅವರು ಅಂಥ ಅರ್ಜಿಗಳನ್ನು ನಿರ್ಣಯಿಸತಕ್ಕದ್ದು.*

18. ಅರ್ಜಿದಾರರ ಮಾನ್ಯ ನ್ಯಾಯವಾದಿಗಳ ವಾದಾಂಶಗಳಲ್ಲಿ ಮಾರುಕಟ್ಟೆ ಸಮಿತಿಯ ಹಾಲಿ ಸದಸ್ಯರನ್ನು ಅನರ್ಹಗೊಳಿಸಲು ಸಹ ಮೇಲೆ ಹೇಳಲಾದ ಅಧಿನಿಯಮದಲ್ಲಿನ ಉಪಬಂಧಿಸಿದ ಯಾವುದೇ ಇತರೆ ಅನರ್ಹತೆಗೆ ಬಾಧಕವಾಗದಂತೆ ಸದಸ್ಯತ್ವವನ್ನು ಅನರ್ಹಗೊಳಿಸುವ ಸಂಬಂಧದಲ್ಲಿ 'ಎಪಿಎಂಸಿ ಅಧಿನಿಯಮದ 16 ಮತ್ತು 17ನೇ ಪ್ರಕರಣದ ವ್ಯಾಪ್ತಿ ಮತ್ತು ಉದ್ದೇಶವನ್ನು ಸಹ ಅನುಬಂಧ–ಇ' ಯಲ್ಲಿರುವ ಅಧಿಸೂಚನೆಯು ಒಳಗೊಂಡಿದೆ ಎಂಬ ಅಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಿರುವರು. ಮೇಲಿನ ಅಧಿನಿಯಮದ 16(1)(ಎ) ಪ್ರಕರಣದ ಅಡಿಯಲ್ಲಿ

ಅನರ್ಹತೆ ಒಳಪಟ್ಟ ವಿಷಯವಾಗಲೀ ಅಥವಾ ವ್ಯಕ್ತಿಯಾಗಲೀ ಪ್ರಶ್ನೆಯನ್ನು ಎತ್ತಿರುವಾಗ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಚುನಾವಣೆಯ ದಿನಾಂಕದಂದು ಆಯ್ಕೆಯಾದ ಅಭ್ಯರ್ಥಿಯು ಅರ್ಹತೆಯನ್ನು ಹೊಂದಿಲ್ಲದಿದ್ದರೆ ಅಥವಾ ಅರ್ಹತೆಯನ್ನು ಹೊಂದಿದ್ದರೆ ಎಪಿಎಂಸಿಯ ನಿರ್ದೇಶಕರು ತಾವಾಗಿಯೇ ಅಥವಾ ಎಪಿಎಂಸಿಯ ಕಾರ್ಯದರ್ಶಿಗೆ ವರದಿ ಮಾಡುವುದಾಗಲೀ ಅಥವಾ ಅನ್ಯಥಾ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ ಮತ್ತು ಸಂಬಂಧಪಟ್ಟ ಸದಸ್ಯರಿಗೆ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ ಮತ್ತು ಅವರಿಗೆ ಅಂಥ ಪರಿಶೀಲನೆ ಅಗತ್ಯವೆಂದು ಭಾವಿಸಿದರೆ, ಅವರೇ ಪ್ರಶ್ನೆಯನ್ನು ನಿರ್ಣಯಿಸಬಹುದು ಮತ್ತು ಅವರ ನಿರ್ಣಯವೇ ಅಂತಿಮವಾಗಿರತಕ್ಕದ್ದು.

19. ಅರ್ಜಿದಾರರ ಮಾನ್ಯ ನ್ಯಾಯವಾದಿಗಳು ಈ ರಿಟ್ ಅರ್ಜಿಯಲ್ಲಿ ಅರ್ಜಿದಾರರು ನಾಮ ನಿರ್ದೇಶಕ ಸದಸ್ಯರಾಗಿರುವುದು ಅನರ್ಹಗೊಂಡಿರುವ ಇಷ್ಟಾನುಸಾರ ಸಿದ್ಧಾಂತವಾಗಿದೆ ಎಂಬ ವಾದಕ್ಕೆ ಪ್ರತ್ಯರ್ಜಿದಾರರು ಅನುಕ್ರಮವಾಗಿಯೇ ವಾದವನ್ನು ಎತ್ತಿ ಹಿಡಿದಿರುವುದು. ವಾದಾಂಶದಲ್ಲಿ ಈ ಮೊಕದ್ದಮೆಯ ಸಂದರ್ಭದಲ್ಲಿ ಸರ್ಕಾರ ಅಧಿನಿಯಮಗಳನ್ನು ಅದು ಶಾಸನವು ತನ್ನ ಪ್ರದತ್ತವಾದ ಅಧಿಕಾರವನ್ನು "ಇಷ್ಟಾನುಸಾರ"ವಾಗಿ ಚಲಾಯಿಸಲು ಮತ್ತು ನಾಮ ನಿರ್ದೇಶನವನ್ನು ಹಿಂಪಡೆಯಲು ಅಥವಾ ಹೊಸ ನಾಮ ನಿರ್ದೇಶನ ಮಾಡಲು ಅದು ಪೂರಕವಾದ ಕಾರಣಗಳನ್ನು ನಮೂದಿಸತಕ್ಕದ್ದು ಮತ್ತು ಸ್ವೇಚ್ಛಾನುಸಾರವಾಗಿ ಕೃತ್ಯವನ್ನು ಎಸಗತಕ್ಕದ್ದಲ್ಲ, ಅದನ್ನು ಸಮರ್ಥನೀಯಗೊಳಿಸಲು ಸಾಧ್ಯವಾಗುವುದಿಲ್ಲ.

20. ಅರ್ಜಿದಾರರು ಈ ರಿಟ್ ಅರ್ಜಿಯಲ್ಲಿ ಅನುಬಂಧ–ಇ ಯಾದ ಸದರಿ ಹುದ್ದೆಗಾಗಿ ಅನರ್ಹಗೊಳ್ಳುವವರೆಗೂ 'ಎಪಿಎಂಸಿ ಅಧಿನಿಯಮ'ದ 16(1)(ಎ) ಪ್ರಕರಣದ ಅಡಿಯಲ್ಲಿ ಅರ್ಜಿದಾರರ ನಾಮ ನಿರ್ದೇಶನವನ್ನು ರದ್ದುಪಡಿಸಿರುವುದನ್ನು ದಿನಾಂಕ 26.05.2017ರಂದು, ಕರ್ನಾಟಕ ಸರ್ಕಾರದ, ಸಹಕಾರಿ ಇಲಾಖೆಯ ಅಧೀನ ಕಾರ್ಯದರ್ಶಿ, ಬೆಂಗಳೂರು ಇವರು ಜಾರಿ ಮಾಡಿದ ಅಧಿಸೂಚನೆಯನ್ನು ಅರ್ಜಿದಾರರು ಪ್ರಶ್ನಿಸಿರುವರು. ಸದರಿ ಅಧಿಸೂಚನೆ ಈ ಕೂಡಲೇ

ಪರಿಣಾಮಕಾರಿಯಾಗತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. 'ಸರ್ಕಾರದ ಇಚ್ಛಾನುಸಾರ'ದ ಆಧಾರದ ಮೇಲೆ ಅರ್ಜಿದಾರರ ನಾಮ ನಿರ್ದೇಶನವಾಗಿರುತ್ತದೆ. ನಾಮನಿರ್ದೇಶನ ರದ್ದುಪಡಿಸುವುದಕ್ಕೆ ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ ಎಂಬುದು ಅರ್ಜಿದಾರರು ಪ್ರಮುಖವಾಗಿ ಎತ್ತಿರುವ ವಾದಾಂಶವಾಗಿದೆ.

21. ***ತಮ್ಮಣ್ಣ –ವಿರುದ್ಧ– ಕರ್ನಾಟಕ ರಾಜ್ಯ***[4] ಮೊಕದ್ದಮೆಯಲ್ಲಿ 14ನೇ ಸಂಖ್ಯೆಯ ಪ್ಯಾರಾದಲ್ಲಿ ನರೈನ್ ಅಗರವಾಲ್ –ವಿರುದ್ಧ– ನಗರ ಪಾಲಿಕೆ, ಷಹಜಹನಪುರಿ (ಪ್ಯಾರ ನಂ.11) ಮೊಕದ್ದಮೆಯಲ್ಲಿ ಚರ್ಚೆಯ ನಿರ್ಣಯವು ಈ ಕೆಳಗಿನಂತಿದೆ:

> "ನಮ್ಮ ಅಭಿಪ್ರಾಯದಲ್ಲಿ, ಅಂಥ ಉಪಬಂಧಗಳು ಸಂವಿಧಾನದ ಯಾವುದೇ ಅನುಚ್ಛೇದವನ್ನಾಗಲೀ ಯಾವುದೇ ಸಾರ್ವಜನಿಕ ಕಾರ್ಯನೀತಿಯ ವಿರುದ್ಧವಾಗಲೀ ಅಥವಾ ಸಂವಿಧಾನದಲ್ಲಿ ಎತ್ತಿ ಹಿಡಿಯಲಾಗಿರುವಂತಹ ಪ್ರಜಾಸತ್ತಾತ್ಮಕ ನಿಬಂಧನೆಗಳಿಗೆ ಯಾವುದೇ ಅಡ್ಡಿ ಆತಂಕಗಳನ್ನು ಉಂಟು ಮಾಡದಿರುವುದು. ಸ್ವಾಭಾವಿಕ ನ್ಯಾಯ ತತ್ವದಲ್ಲಿ ಮಾಡಿದ ಯಾವುದೇ ಉಲ್ಲಂಘನೆ ಪ್ರಶ್ನೆ ಇಲ್ಲದಿರುವುದು ಅಥವಾ ಅಧಿನಿಯಮದ 9ನೇ ಪ್ರಕರಣದ ನಾಲ್ಕನೇ ಪರಂತುಕದಲ್ಲಿ ಒಳಗೊಂಡಿರುವ ಇಷ್ಟಾನುಸಾರದ ತತ್ವದ ಅಡಿಯಲ್ಲಿ ನಾಮನಿರ್ದೇಶಿತ ಸದಸ್ಯರು ತೆಗೆದು ಹಾಕುವ ಅಥವಾ ತೆಗೆದು ಹಾಕಲಾಗದ ಮುಂಚೆ ಅವರಿಗೆ ಕಾರ್ಯ ಸಾಧ್ಯವಾದ ಯಾವುದೇ ಅವಕಾಶವನ್ನು ನೀಡುವುದಿಲ್ಲ. ನಾಮ ನಿರ್ದೇಶಿತ ಸದಸ್ಯರುಗಳ ಕಾರ್ಯನಿರ್ವಹಣೆ ಅಥವಾ ಗುಣ ಸ್ವಭಾವದ ಮೇಲೆ ಯಾವುದೇ ಅತೃಪ್ತಿ ಉಂಟಾಗುವುದು. ಇದೆಲ್ಲವು ಸಂಪೂರ್ಣವಾಗಿ ರಾಜಕೀಯ ಪರಿಗಣನೆಗೆ ಒಳಪಡುತ್ತದೆ."

22. "ಇಷ್ಟಾನುಸಾರ" ತತ್ವವು ಘನ ಸರ್ವೋಚ್ಚ ನ್ಯಾಯಾಲಯದ ಮುಂದೆ ***ಓಂ ನರೈನ್ ಅಗರ್‌ವಾಲ್ –ವಿರುದ್ಧ– ನಗರ್ ಪಾಲಿಕಾ, ಷಹಜಹನ್‌ಪುರ***[5]

4. 1994 ಐಎಲ್‌ಆರ್ ಕರ್ನಾಟಕ 308 5. 1993 ಎಐಆರ್ (ಎಸ್‌ಸಿಡಬ್ಲ್ಯೂ) 1254

ಮೊಕದ್ದಮೆಯಲ್ಲಿ ಪರಿಗಣನೆಗೆ ತೆಗೆದುಕೊಂಡು ನಿರ್ಣಯಿಸಿರುತ್ತದೆ. ಸದರಿ ಮೊಕದ್ದಮೆಯಲ್ಲಿ ಇಬ್ಬರು ಮಹಿಳಾ ಸದಸ್ಯರನ್ನು ರಾಜ್ಯ ಸರ್ಕಾರದ ಇಷ್ಟಪರ್ಯಂತ ಮತ್ತು ಸಮ್ಮತಿಗೆ ಒಳಪಟ್ಟು ನಾಮ ನಿರ್ದೇಶಿಸಲಾಗಿರುತ್ತದೆ. ಘನ ಸರ್ವೋಚ್ಚ ನ್ಯಾಯಾಲಯ ಮಾಡಿದ ಇಚ್ಛಾನುಸಾರ ತತ್ವದ ಅಭಿಪ್ರಾಯೋಕ್ತಿಗಳು ಪುಟ ಸಂಖ್ಯೆ:1263ರಲ್ಲಿದೆ, ಅದು ಈ ಮುಂದಿನಂತಿದೆ:

> *"ರಾಜ್ಯ ಸರ್ಕಾರ ಇಚ್ಛಾನುಸಾರದಂತೆ ಮತ್ತು ತೃಪ್ತಿದಾಯಕ ವಿಷಯಕ್ಕೊಳಪಟ್ಟಂತೆ ಇಬ್ಬರು ಮಹಿಳಾ ಸದಸ್ಯರನು ನಾಮ ನಿರ್ದೇಶನ ಮಾಡಲು ಉಪಕ್ರಮಿಸಿದೆ. ಇಂಥ ನೇಮಕಾತಿ ನಾಮನಿರ್ದೇಶನದ ಉಪಕ್ರಮದಲ್ಲಿ ಪ್ರಮುಖವಾಗಿ ರಾಜಕೀಯ ಪರಿಗಣನೆಯೇ ಆಧಾರಿತವಾಗಿರುತ್ತದೆ ಮತ್ತು ಈ ನೇಮಕಾತಿ ಸಂವಿಧಾನದ ಯಾವುದೇ ಉಪಬಂಧದ ಉಲ್ಲಂಘನೆಯು ಆಗಿರುವುದಿಲ್ಲ. ಇಂಥಹ ಸಂದರ್ಭದಲ್ಲಿ ವಿಧಾನಮಂಡಲದ ಅಧಿಕಾರ ಹೊಂದಿರುವ ರಾಜ್ಯ ಸರ್ಕಾರವು ತನ್ನ ಇಚ್ಛಾನುಸಾರ ಅಂಥ ನೇಮಕಾತಿಯನ್ನು ಮುಕ್ತಾಯಗೊಳಿಸಬಹುದಾಗಿದೆ ಮತ್ತು ಅವರ ಸ್ಥಾನಗಳಿಗೆ ಹೊಸ ಸದಸ್ಯರನ್ನು ನಾಮನಿರ್ದೇಶಿಸಬಹುದು."*

23. ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರರು ಮೇಲಿನ ಬ್ಯಾಡಗಿ, ಎಪಿಎಂಸಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿತ್ತು. ಆದರೆ ಅವರ ಅನರ್ಹತೆಯ ದೃಷ್ಟಿಯಿಂದ ಅನುಬಂಧ–ಇ ಯನ್ನು ನೋಡುವುದು ಅದರಂತೆ ಅವರ ನಾಮನಿರ್ದೇಶನವನ್ನು ವಜಾ ಮಾಡಲಾಗಿದೆ.

24. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ನ್ಯಾಯವಾದಿಗಳು ಈ ನ್ಯಾಯಾಲಯವು ಮೇಲೆ ಉಲ್ಲೇಖಿಸಿದ ಎಪಿಎಂಸಿ ಅಧಿನಿಯಮದ 16 ಮತ್ತು 17ನೇ ಪ್ರಕರಣದಲ್ಲಿ ಮಾಡಿದ ಅಭಿಪ್ರಾಯೋಕ್ತಿಗಳನ್ನ ಗಮನಕ್ಕೆ ತಂದುಕೊಳ್ಳಬೇಕೆಂದು ನಿವೇದಿಸಿರುವರು. 1 ರಿಂದ 3ನೇ ಪ್ರತ್ಯರ್ಜಿದಾರರು ಪ್ರಸ್ತುತ

ಮೊಕದ್ದಮೆ ಸಂದರ್ಭದಲ್ಲಿ ದುರ್ಭಾವನೆಯ ಉದ್ದೇಶದಿಂದಲೇ ಅಧಿಸೂಚನೆಯನ್ನು ಹೊರಡಿಸಿರುವರು. ಸರ್ಕಾರವು ‘‘ಇಚ್ಚಾನುಸಾರ ತತ್ವದ’’ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವ ಸಂದರ್ಭದಲ್ಲಿ ನ್ಯಾಯಿಕ ಪುನರವಲೋಕನದ ವ್ಯಾಪ್ತಿಯನ್ನು ದುರುದ್ದೇಶದಿಂದಲೇ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿರುವುದು ಸಹ ರುಜುವಾತಾಗುತ್ತದೆ ಎಂದು ನಿವೇದಿಸಿರುವರು. ರಿಟ್ ಅರ್ಜಿಯಲ್ಲಿ 1 ರಿಂದ 3ನೇ ಪ್ರತ್ಯರ್ಜಿದಾರರು ಹೊರಡಿಸಿದ ಪ್ರಶ್ನಿತ ಅಧಿಸೂಚನೆಯ ಆಪಾದನೆಗಳನ್ನು ಅಲ್ಲದೆ, ಅರ್ಜಿದಾರರು ಮೇಲಿನ ದ್ವೇಷ–ಅಸೂಯೆಯಿಂದಲೇ 5ನೇ ಪ್ರತ್ಯರ್ಜಿದಾರರು ಈ ಪ್ರಮುಖವಾದ ಆಪಾದನೆಯನ್ನು ಮಾಡಿರುವರು. ರಿ.ಅ.ಸಂಖ್ಯೆ: 103646/ 2017ನ್ನು ದಾಖಲಿಸಿರುವರು.

25. ಅರ್ಜಿದಾರರ ಮಾನ್ಯ ನ್ಯಾಯವಾದಿಗಳು ಪ್ರಮುಖವಾಗಿ ವಾದಿಸಿದ, ಮಂಡಿಸಿದ ದಾಖಲೆಯಲ್ಲಿ ಬ್ಯಾಡಗಿ, ಎಪಿಎಂಸಿಯಲ್ಲಿ ಸದಸ್ಯರಾಗಿ ನಾಮ ನಿರ್ದೇಶಿತರಾದ ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳಲ್ಲಿರುವ ವಸ್ತು ವಿಷಯಗಳಲ್ಲಿ ಹೇಳಲಾದ ದುರ್ಬಾವನೆಯಿಂದಲೇ ಹೊರಡಿಸಿದ ಪ್ರಶ್ನಿತ ಅಧಿಸೂಚನೆ ಅನುಬಂಧ–ಇ ನೋಡಿ ನಿರರ್ಥಕವಾದುದು ಎಂದು ನಿವೇದಿಸಿರುವರು.

26. 5ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮತ್ತು 1 ರಿಂದ 3ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ವಾದಿಸಿದ ಪ್ರಮುಖಾಂಶಗಳಲ್ಲಿ ಅರ್ಜಿದಾರರು ವ್ಯಾಪಾರಿ ಲೈಸೆನ್ಸ್ ಅನ್ನು ಹೊಂದಿರುವರು ಮತ್ತು ಅವರೊಬ್ಬ ವ್ಯಾಪಾರಸ್ಥರಾಗಿರುವರು ಎಂಬುದನ್ನು ರುಜುವಾತುಪಡಿಸುವ ವ್ಯಾಪಾರಿ ಲೈಸೆನ್ಸಿನ ಒಂದು ಪ್ರತಿಯನ್ನು ಅನುಬಂಧ– ಆರ್.1ರಲ್ಲಿ ಹಾಜರುಪಡಿಸಿರುವರು, ‘‘ಏಜೆಂಟ್ ಮತ್ತು ವ್ಯಾಪಾರಿಗಳ’’ ಸಮಿತಿಯ ಮತದಾರರ ಪಟ್ಟಿಯಲ್ಲಿ ಅರ್ಜಿದಾರರು ಹೆಸರು ಇರುವುದನ್ನು ಬಹಿರಂಗಪಡಿಸುವ ಮತಪಟ್ಟಿಯ ಪ್ರತಿಯನ್ನು ಅನುಬಂಧ– ಆರ್.2ರಲ್ಲಿ ಹಾಜರುಪಡಿಸಿರುವರು.

27. ಸದರಿ ದಸ್ತಾವೇಜುಗಳ ಆಧಾರದ ಮೇಲೆ ಅರ್ಜಿದಾರರು ಏಜೆಂಟುಗಳ ಮತ್ತು ವ್ಯಾಪಾರಿಗಳ ಸಮಿತಿಯ ಮತಕ್ಷೇತ್ರಕ್ಕಾಗಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿರುವುದು ರುಜುವಾತಾಗುತ್ತದೆ. ಆದರೆ ಚುನಾವಣೆಯಲ್ಲಿ ಅವರು ಸೋತ್ತಿರುತ್ತಾರೆ. 2016ರ ವರ್ಷದಲ್ಲಿ ಮಾರುಕಟ್ಟೆ ಸಮಿತಿಯ ಚುನಾವಣೆಯು ನಡೆದಿರುತ್ತವೆ, ಚುನಾವಣಾ ಪ್ರಕ್ರಿಯೆಗಳೆಲ್ಲವು 14.01.2017ರಂದು ಮುಕ್ತಾಯಗೊಂಡಿರುತ್ತದೆ.

28. 5ನೇ ಪ್ರತ್ಯರ್ಜಿದಾರರು ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 103646/2017ರಲ್ಲಿ ಅರ್ಜಿದಾರರನ್ನು ನಾಮ ನಿರ್ದೇಶನ ಮಾಡಲು ಅವಲಂಬಿಸಿದ 'ಎಪಿಎಂಸಿ ಅಧಿನಿಯಮ'ದ 16(1)(ix) ಪ್ರಕರಣದ ಉಪಬಂಧಗಳ ಅನುಸಾರ ವಜಾ ಮಾಡಬೇಕೆಂದು ಕೋರಿರುತ್ತಾರೆ. ಮೇಲೆ ಹೇಳಲಾದ ರಿಟ್ ಅರ್ಜಿಯನ್ನು ಸರ್ಕಾರಕ್ಕೂ ಸಲ್ಲಿಸಲಾಗಿದೆ. ಅರ್ಜಿದಾರರ ನಾಮ ನಿರ್ದೇಶನವನ್ನು ಹಿಂತೆಗೆದುಕೊಳ್ಳುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲು ಕೋರಿರುವವರು ಮತ್ತು ತತ್ಪರಿಣಾಮವಾಗಿ ಈ ರಿಟ್ ಅರ್ಜಿಯಲ್ಲಿ ಅನುಬಂಧ–ಇಯನ್ನು ಪ್ರಶ್ನಿಸಿರುವರು. ಪ್ರಶ್ನಿತ ಅಧಿಸೂಚನೆಯನ್ನು ಕರ್ನಾಟಕ ಸರ್ಕಾರ, ಸಹಕಾರಿ ಇಲಾಖೆಯವರು ಹೊರಡಿಸಿರುತ್ತಾರೆ.

29. ಸಾಧ್ಯವಾದಷ್ಟು ಸಂಬಂಧಪಟ್ಟ 'ಇಚ್ಛಾನುಸಾರ ತತ್ವ'ವನ್ನು ಈ ನ್ಯಾಯಾಲಯದ ***ವಿಭಾಗೀಯ ಪೀಠ ಖುಸ್ರೋ ಖುರೇಷಿ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** (ಮೇಲಿನ) ಮೊಕದ್ದಮೆಯಲ್ಲಿ ಅಭಿವ್ಯಕ್ತಿಸಿದ ಅಭಿಪ್ರಾಯೋಕ್ತಿಗಳು ಈ ಕೆಳಗಿನಂತಿದೆ:

> *"ಶಾಸನವು ಹಕ್ಕನ್ನು ಸೃಜಿಸುತ್ತದೆ, ವಾಸ್ತವವಾಗಿ ಶಾಸನವು ಹಕ್ಕುಗಳನ್ನು ಪರಿಮಿತಗೊಳಿಸುತ್ತವೆ ಅಥವಾ ಮೊಟಕುಗೊಳಿಸುತ್ತದೆ. ಇತರ ಶಾಸನದ ಅಡಿಯಲ್ಲಿ ಅಥವಾ ಭಾರತ ಸಂವಿಧಾನದ ಅಡಿಯಲ್ಲಿ ಗೈರು ಹಾಜರಾಗಿದ್ದ ಕೆಲವು ಇತರ ಹಕ್ಕುಗಳನ್ನು, ಸ್ವಾಭಾವಿಕ ನ್ಯಾಯತತ್ವದ ಆಧಾರದ ಹಕ್ಕನ್ನು ಕ್ಲೇಮು ಮಾಡಲು ಸಾಧ್ಯವಿಲ್ಲ. ಈ ಸಂಬಂಧದಲ್ಲಿ ಸರ್ಕಾರದ ಇಚ್ಛಾನುಸಾರವಾಗಿ ನೇಮಕಗೊಂಡ*

*ವ್ಯಕ್ತಿಯೂ ಅಂಥ ಶಾಸನಾತ್ಮಕ ಪರಿಮಿತಿ ಅಥವಾ ಶಾಸನಾತ್ಮಕ ಮೊಟಕುಗೊಳಿಸುವ ವಿಷಯಕ್ಕೊಳ್ಳಪಟ್ಟಂತೆ ವ್ಯಕ್ತಿಯು, ಇಚ್ಚಾನುಸಾರ ತತ್ವದಡಿಯಲ್ಲಿ ಅವನನ್ನು ತೆಗೆದು ಹಾಕುವ ಮುಂಚೆ, ತೆಗೆದುಹಾಕದ ಪಕ್ಷದಲ್ಲಿ ವ್ಯಕ್ತಿಯ ಅಹವಾಲನ್ನು ಕೇಳಲು ಯಾವುದೇ ಹಕ್ಕನ್ನು ಕ್ಲೇಮು ಮಾಡಲು ಅವಕಾಶವಿಲ್ಲ"ವೆಂದು ನಿರ್ಣಯಿಸಿದೆ.*

30. ಈ ಮೊಕದ್ದಮೆಯ ಸಂಬಂಧದಲ್ಲಿ, ಬ್ಯಾಡಗಿ, ಎಪಿಎಂಸಿಗೆ ಅರ್ಜಿದಾರರು ಸದಸ್ಯನಾಗಿ ಮಾಡಿದ ನಾಮ ನಿರ್ದೇಶನವನ್ನು ಎಪಿಎಂಸಿ ಅಧಿನಿಯಮದ 1966ರ 16(1)(ಎ) ಪ್ರಕರಣದ ಅಡಿಯಲ್ಲಿ ಅನರ್ಹಗೊಳಿಸಲಾಗಿದೆ ಮತ್ತು ಅರ್ಜಿದಾರರ ನಾಮ ನಿರ್ದೇಶನವನ್ನು ವಜಾಗೊಳಿಸಲಾದ ಅಧಿಸೂಚನೆಯು ಅನುಬಂಧ–ಇ ಯಲ್ಲಿದೆ.

31. ಸರ್ಕಾರವು ಅರ್ಜಿದಾರನ ವೃತ್ತಿಯು ವ್ಯಾಪಾರಿಯಾಗಿರುವ ಸಂಗತಿಯನ್ನು ಅದು ಪರಿಗಣಿಸಿದೆ ಮತ್ತು ಎಪಿಎಂಸಿ ಅಧಿನಿಯಮದ 16ನೇ ಪ್ರಕರಣ ನಿಷೇದಕ್ಕೆ ಒಳಗಾಗುವುದನ್ನು ತಪ್ಪಿಸುವ ಸಲುವಾಗಿಯೇ ಸರ್ಕಾರವು ಇಚ್ಚಾನುಸಾರ ತತ್ವದ ಅಡಿಯಲ್ಲಿ ನಾಮ ನಿರ್ದೇಶನವನ್ನು ಹಿಂಪಡೆದುಕೊಂಡಿದೆ. ಅರ್ಜಿದಾರರು ಒತ್ತಾಯಿಸಿದ ವಿವಿಧ ಕಾರಣಗಳು ಮತ್ತು ಈ ಸಂಬಂಧದಲ್ಲಿ ಅರ್ಜಿದಾರರು ಅವಲಂಬನೆಯಾಗಿ ನೀಡಿದ ನಿರ್ಣಯಗಳು ಅರ್ಜಿದಾರರ ಮೊಕದ್ದಮೆಗೆ ಸಮರ್ಥನೀಯವಾಗಿರುವುದಿಲ್ಲ. ಈ ಎಲ್ಲಾ ಕಾರಣದಿಂದ ರಿಟ್ ಅರ್ಜಿಯು ಗುಣಾರ್ಹತೆಯನ್ನು ಹೊಂದಿಲ್ಲದ ಕಾರಣ ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ. ತದನುಸಾರವಾಗಿ ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

**ಆಜ್ಞೆ**

ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.